MATTER UNDER RULE-312

(i) *Re: Discrimination in the supply of raw materials to wire drawing units.*

SRI PRABHAKAR R. TELKAR.—Sir, this is a matter regarding the Wire drawing units in Karnataka State. There were about 60 wire drawing units which were registered in 1972–73 and all these wire drawing units were getting raw-materials, wire-rods through the Hindustan Steel Limited and Karnataka Small Scale Industries Development Corporation. The recommending authority for allotting these wire-rods was the Joint Director of Industries, Government of Karnataka. The Join Director was assessing the capacity of the each wire drawing unit and was recommending for allotment of raw-materials. There was a ban order in force in the year 1974–75 and the Karnataka Small Scale Industries Development Corporation did not get the wire-rods to these units and Messrs. Steel Authority of India Limited (SAIL) were given power to look after the requirement of these small scale industries Out of these 16 old units. only 4 units, namely, Mysore Steel Works, Iron Steel Industries, Raghunath Industries and Master products were provided with the raw-materials along with some new units.through the Steel Authority of India Limited. After 1974-75, the powers which were vested with the State Government were taken over by the Steel Authority of India Limited and a new policy was adopted under which these wire drawing units were taking wire rods from the Au hority. The iron rods were available in plenty and as such the Steel Authority of India Limited were selling these rods to the traders. Thereafter, the maximum allotment was made in the year 1979. While allotting these wire rods to these units in Karnataka, their off-take for three years was taken into consideration and accordingly they were allotted. Now, according to the new policy, some new units have come up. The local entrepreneurs who are Kannadigas were not allotted more quantity of wire rods. I will just quote an instance. A unit having the capacity of 50 H.P. exclusively meant for wire drawing was getting 11 M.tonnes of wire rods whereas an unit having the capacity of 90 H.P. was getting 100 M.tonnes of wire rods. So, actually the unit having the capacity of 90 H.P., should have been allotted 18 M.tonnes of wire rods. So, such of the new units which have come up recently, are getting more quota beyond their capacity. So, the local entrepreneurs are hardly getting any raw-material whereas the people from outside the State are getting more and more raw-materials and thus there are so many units which are on the verge of closure for want of wire rods. My earnest request to the Government is that such of the units which were established during 1972–73 shoul

be prov ded with adequate raw-materials. Since the Steel Authority of India Limited has the power of allotment, I urge the State Govern ment to request the Central Government to see that such of the units which have been functioning properly and which have got proper capacity to work should be provided with adequate raw-materials. What was happened is that the entrepreneurs who have come from outside very recently are getting more and more raw-materials depriving the old units of their requirements. I have written letters to the Chief Minister as well as to the previous Industries Minister regarding Raghunath Industry which was got more capacity but is not getting raw-material for the last one year. we are trying to see that such industries should come up. They are on the verge of closure and they are intending to go to Tamil Nadu, Andhra Pradesh etc., what is our Department doing? The department is not helping the entre-preneurs belonging to Karnataka. I urge upon the State Government to give serious consideration to this matter and see that the old units and the entrepreneurs belonging to our State should get adequte raw-materials.

SRI M. VEERAPPA MOILY.—Sir, before making a statement or seeking permission to make the statement, I would make it clear to this August House and also to the hon'ble Member that it is practi-cally a subject which has to be taken up in the Parliament and the subject pertains to the SAIL Board which comes under the Steel Ministry. In fact many of the questions raised pertain to the Steel Ministry. We could have requested the Legislature Secretariat not to allow this subject to be raised but somehow, it has been allowed. It is appropriate that we do not pass any remarks because the SAIL Board is not here to answer. I personally feel and urge the hon'ble Members of this House not to take up the matter again. It may be more appropriately taken up in the Parliament because they are well equipped with the requisite information to answer the questions. In all fairness, I will make this statement. Thereafter, further questions need not be raised and the hon'ble Member can take up the matter with the Central Government.

With the permission of the Chair, I make the following state-ment.

The total number of units using wire rods as raw-material in Karnataka State are 41. Of these the following are registered with Steel Authority of India Limited.

Old Units	...	20 (Registered before 30-6-1978)

New Units ... 11 (Registered after 30-6-1978 and before 30-6-1979)

The remaining ten units are not registered with the Steel Authority of India.

The distribution of wire rods to these units is done by the Steel Authority of India. The Karnataka State Small Industries Development Corporation receives a small quantity of wire rods, but the major portion of supply is made directly by SAIL to the units. As per circular issued by the Steel Authority of India the distribution is made on the following basis.

NEW UNITS/ADDITIONAL CAPACITY.—

Units to whom capacity certificates have been issued by the concerned authorities after 30-6-1978 but before 30-6-1979, will be treated as new units. In the case of such units, in the event of their not having any off-take from SAIL Plants/Stockyards and respective Small Scale Industries Corporations, the entitlement will be 20% of the licenced assessed capacity.

If any of the existing units, who have been issued additional/expanded capacity certificates after 30-6-1978 but before 30-6-1979, 20% of such additional expanded capacity should be added to their normal entitlement arrived at on the basis of best of last 3 years off-take from SAIL Plants/stockyards and respective Small Scale Industries Corporations.

Sick Units.—

For calculating the individual units entitlement, instead of the normal best of last three years off-take best of last five years off take would be taken into account. The onus in this regard to produce to the Branch Manager the requisite documents (copy of invoices etc) to establish the best of last five years off-take will be on the units concerned. Such cases will also require recommendation from a nationalised bank or Government financial institution, clearly stipulating that.—

(1) the unit can be considered as a sick unit and

(2) they (the recommending bank/Government Financial Institutions) are assisting in the units rehabilitation)

In the case of sick units which had no off-take even during the preceding five years, their cases will be considered by Iron & Steel Controller. Therefore, whenever such units approach the branches, they should be requested to take up the matter with the Iron and Steel Controller.

Entitlement Based on Last Year's EEPC Off-Take.—

The entitlement of the units which have taken wire rods during the year 1978-79 against Iron & Steel Controller's EEPC release orders, will be either.

1. Best of last three years off-take, as per normal formula.

or

2. 50% of supplies made to them, against EEPC release orders during 1978-79, at the unit's choice.

In the event of any units choosing the latter, no additional supply for executing export orders against current year EEPC release orders, if any, will be allowed.

For the purpose of computation of the best of last three years off-take of the units mentioned above, the off-take against EEPC release orders and off-take for resale purposes, will be excluded.

The actual supplies to indivdual units, belonging to the above three categories, either from plants or from the stockyards, would be on the basis of availability pro-rated to total entitlement of all units sent together.

The matter raised by the Hon'ble member pertains to discriminations in the distribution of this raw material by Steel Authority of India. Steel Authority of India if an undertaking of the Government of India. If any specific instances are brought to the notice of the Government, the matter will be taken up with the Government of India.

We have given this limited answer and further details like discrimination shown in allotment etc., may be referred to us and we can take up the matter with the Steel Authority of India Limited We tried to seek some information from the Steel Authority. we are not entitled to collect the information and it is for the Steel Ministry to get the particulars. In future this matter may not be raised. I request the hon'ble Member not to raise this issue again and cause any embarrassment because the anthority to answer is not here.

(*ii*) *re : Conducting raids of houses of officers by the Vigilence Commission.*

ಶ್ರೀ ಹೆಚ್.ಟಿ. ಕೃಷ್ಣಪ್ಪ (ನಾಗಮಂಗಲ).—ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ನಮ್ಮ ರಾಜ್ಯದ ಜಾಗೃತ ಆಯೋಗ ಕೆಲವು ಅಧಿಕಾರಿಗಳ ಮನೆಗೆ ಧಾಳಿ ಮಾಡಿರತಕ್ಕದ್ದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಆಡಳಿತವನ್ನು ಶುದ್ಧೀಕರಣ ಮಾಡುವ ದಿಸೆಯಲ್ಲಿ ಇದೊಂದು ಉತ್ತಮಕಾರ್ಯ ಎಂದು ಯಾರಾದರೂ ಹೇಳಲೇಬೇಕಾಗುತ್ತದೆ. ಉನ್ನತವಾದ ಸ್ಥಾನದಲ್ಲಿದ್ದುಕೊಂಡು ಆ ಸ್ಥಾನವನ್ನು ದುರುಪ

ಯೋಗ ಮಾಡಿಕೊಂಡು ಕಾನೂನು ಬಾಹಿರವಾದ ಮಾರ್ಗಗಳನ್ನು ಅನುಸರಿಸಿ ಹಣ ಸಂಪಾದನೆ ಮಾಡಿರುವವರು ಯಾರೇ ಆಗಿದ್ದರೂ ಕೂಡ ಅವರು ಸಮಾಜಘಾತುಕ ಶಕ್ತಿಗಳು ಎಂದು ನಿರ್ಣಯ ಮಾಡಬೇಕಾಗುತ್ತದೆ. ಅಂಥವರ ಮೇಲೆ ಯಾವ ರೀತಿಯ ಉಗ್ರ ಕ್ರಮ ತೆಗೆದುಕೊಂಡರೂ ಈ ಸದನದ ಸದಸ್ಯರು ಬೆಂಬಲಿಸತಕ್ಕವರಾಗಿದ್ದಾರೆ. ಅವರ ಕಾರ್ಯಾಚರಣೆ ಬಗ್ಗೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ಕಾರ್ಯವಿಧಾನದಲ್ಲಿ ನಡೆದಿರುವ ಕೆಲವು ಆಶ್ಚರ್ಯಕರವಾದ ವಿಚಾರವನ್ನು ಈ ಸದನದ ಗಮನಕ್ಕೆ ತರುವುದು ನನ್ನ ಉದ್ದೇಶ. ಇದುವರೆಗೂ ಸಹ ೯ ಜನ ಅಧಿಕಾರಿಗಳ ಮನೆಗಳನ್ನು ಜಾಗೃತ ಆಯೋಗದವರು ದಾಳಿ ಮಾಡಿದ್ದಾರೆ. ಅಲ್ಲಿ ಸಿಕ್ಕಿರತಕ್ಕ ಹಣ ಮತ್ತು ಬೆಲೆ ಬಾಳತಕ್ಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಅವರು ಎಷ್ಟರಮಟ್ಟಿಗೆ ಹಣವನ್ನು ಕಾನೂನು ಸಮ್ಮತ ಮಾರ್ಗಗಳಲ್ಲಿ ಸಂಪಾದನೆ ಮಾಡಿಟ್ಟುಕೊಂಡಿದ್ದಾರೋ ಅಥವಾ ಕಾನೂನುಬಾಹಿರವಾದ ಮಾರ್ಗಗಳಲ್ಲಿ ಸಂಪಾದನೆ ಮಾಡಿಟ್ಟುಕೊಂಡಿದ್ದಾರೋ ಗೊತ್ತಿಲ್ಲ. ಇದು ಮುಂದೆ ತನಿಖೆ ವಿಚಾರಣೆ ಆಗತಕ್ಕ ಕಾಲದಲ್ಲಿ ಹೊರಬರತಕ್ಕ ಅಂಶ. ಆ ವಿಚಾರಕ್ಕೆ ನಾನು ಹೋಗುವುದಿಲ್ಲ. ಇಲ್ಲಿ ಒಂದೇ ಇಲಾಖೆಗೆ ಸೇರಿದ ೯ ಜನ ಅಧಿಕಾರಿಗಳ ಮನೆ ಮೇಲೆ ಧಾಳಿ ನಡೆದಿದೆ. ನನ್ನ ಪ್ರಶ್ನೆ ಏನೆಂದರೆ ಜಾಗೃತ ಆಯೋಗದವರ ದೃಷ್ಟಿಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಇರತಕ್ಕವರೇ ಭ್ರಷ್ಟಾಚಾರ ಮಾಡತಕ್ಕವರು ಬೇರೆಯವರು ಸತ್ಯಹರಿಶ್ಚಂದ್ರರಂ ಎಂಬ ಭಾವನೆ ಇದೆಯೇ ? ಲೋಕೋಪಯೋಗಿ ಇಲಾಖೆಗಿಂತಲೂ ಹತ್ತು ಪಟ್ಟು ವ್ಯಾಪಕವಾದ ಭ್ರಷ್ಟಾಚಾರ ಇರತಕ್ಕ ಬೇರೆ ಇಲಾಖೆಗಳಿವೆ. ಅದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಆದರೆ ಅವರ ತಂಟೆಗೆ ಹೋಗಿಲ್ಲ. ಏತಕ್ಕೆ ಹೋಗಿಲ್ಲ, ಇದರ ರಹಸ್ಯವೇನು ಎಂಬುದನ್ನು ತಿಳಿದುಕೊಳ್ಳುವ ಉದ್ದೇಶದಿಂದ ಈ ಪ್ರಶ್ನೆಯನ್ನು ಹಾಕಿದ್ದೇನೆ. ಲೋಕೋಪಯೋಗಿ ಇಲಾಖೆ ಒಂದನ್ನೇ ತಮ್ಮ ಕಾರ್ಯಾಚರಣೆಗೆ ಸೀಮಿತಗೊಳಿಸಿರುವುದರ ಬಗ್ಗೆ ತಿಳಿದುಕೊಳ್ಳುವುದು ನನ್ನ ಉದ್ದೇಶ. ಆದರೆ...

ಶ್ರೀ ಶೀರ್ನಾಳ ಚಂದ್ರಶೇಖರ್.—ಎಲ್ಲರ ಮನೆಯ ದೋಸೆ ತೂತಾದರೆ ಕೆಲವರ ಮನೆಯ ಕಾವಲಿಯೇ ತೂತು. ಅದನ್ನು ಹೇಳುತ್ತಿದ್ದಾರೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—೯ ಜನ ದಾಳಿಗೆ ಒಳಪಟ್ಟಿರತಕ್ಕ ಅಧಿಕಾರಿಗಳಿದ್ದಾರೆ. ಒಬ್ಬರು ಬಲಿಜ ಜಾತಿಗೆ ಸೇರಿದವರು, ಮತ್ತೊಬ್ಬರು ವಡ್ಡ ಜಾತಿಗೆ ಸೇರಿದವರು ಮತ್ತೊಬ್ಬರು ಮುಸಲ್ಮಾನ್...

MR. DEPUTY SPEAKER.—Will it be proper to mention the names ?

SRI H.T. KRISHNAPPA.—I am not telling anything. I have got the names also.

4-30 P.M.

I am not going out of way. I am just brining to the notice of the House whatever that has taken place. Only one gentleman is a Muslim and the rest are Vokkaligas. ನಾನು ಒಕ್ಕಲಿಗ. ಆದರೆ ನಾನು ಜಾತಿವಾದಿಯಲ್ಲ.

ಶ್ರೀ ವಿ. ಎಂ. ಮತ್ತಿಕಟ್ಟಿ.—ಅದರಲ್ಲಿ ಲಿಂಗಾಯಂತರೂ ಇದ್ದಾರೆ. ಪಟ್ಟಿಯಲ್ಲಿರುವವರಲ್ಲಿ ಮೊದಲನೆಯವರೇ ಲಿಂಗಾಯತರು.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಒಕ್ಕಲಿಗರು ಏಳು ಜನರಿದ್ದಾರೆ. ಅಂದಮಾತ್ರಕ್ಕೇ ನಾನು ಒಕ್ಕಲಿಗರ ಪರವಾಗಿ ವಾದ ಮಾಡುತ್ತಿದ್ದೇನೆಂದು ದಯವಿಟ್ಟು ಭಾವನೆ ಮಾಡಿಕೊಳ್ಳಬಾರದು. ದೇಶದಲ್ಲಿ ಜಾತಿ ಒಂದು ದೊಡ್ಡ ಶಾಪ. ಆದರೆ ಈ ಶಾಪ ವಿಮೋಚನೆ ಮಾಡತಕ್ಕ ಜನ ಈ ಶಾಪಕ್ಕೆ ತುತ್ತಾಗಿರುವುದು ಮತ್ತು ಜಾತಿಯ ಪ್ರಭಾವಕ್ಕೊಳಗಾಗಿರುವುದು ದುರ್ದೈವ. ಯಾವುದೇ ಒಬ್ಬ ಮಂತ್ರಿ ಜಾತಿವಾದಿಯಾಗಿದ್ದರೆ ಅದರಿಂದ ಯಾರಿಗೂ ನಷ್ಟವಾಗುವುದಿಲ್ಲ. ನಷ್ಟವಾಗುವುದಿದ್ದರೆ ಆತನಿಗೇ ಆಗುತ್ತದೆ. ಆದರೆ ಒಂದು ಗುಂಪು ಜಾತಿವಾದಿಯಾದರೆ, ಬೇರೆ ಜಾತಿಗಳನ್ನು ಪ್ರಚೋದಿಸುವಂಥ ದುಷ್ಕೃತ್ಯ ಮಾಡಿದಂತಾಗುತ್ತದೆ. ಜನ ಸಮಂದಾಯದ ಪರವಾಗಿ ಅಧಿಕಾರ ನಡೆಸತಕ್ಕ ಜನ–ಅವರು ಮಂತ್ರಿಯಾಗಿರಲಿ ಅಥವಾ ಬೇರೆ ಯಾವುದೇ ಸ್ಥಾನದಲ್ಲಿ ಕೆಲಸ ಮಾಡುತ್ತಿರಲಿ–ಜಾತಿವಾದಿಗಳಾದರೆ ದೇಶಕ್ಕೆ ಭವಿಷ್ಯವಿಲ್ಲ.

ಜಾತ್ಯಾತೀತ ಮನೋಭಾವವಿರುವವರು ಇಂಥಾ ಪ್ರವೃತ್ತಿಯನ್ನು ಖಂಡಿತ ಖಂಡಿಸಬೇಕು. ಇಲ್ಲಿ ಆರೋಪಕ್ಕೊಳಗಾಗಿರುವವರು ಎಷ್ಟರಮಟ್ಟಿಗೆ ಭ್ರಷ್ಟಾಚಾರ ಮಾಡಿದ್ದಾರೋ ಅಥವಾ ಎಷ್ಟರಮಟ್ಟಿಗೆ ದುಡ್ಡು ತಿಂದಿದ್ದಾರೋ ನನಗೆ ಗೊತ್ತಿಲ್ಲ. ಅವರನ್ನು ನಾನು ನೋಡಿಲ್ಲ. ಆದರೆ, ಒಂದು ಜಾತಿಗೆ ಸೇರಿದವರನ್ನೇ ಗುರುತಿಸಿರುವುದು ಇಲ್ಲಿರುವ ಪ್ರಶ್ನೆ. ತಪ್ಪು ಮಾಡಿದವನು ಯಾವ ಜಾತಿಗೆ ಸೇರಿರಲಿ ಅವನು ತಪ್ಪಿತಸ್ಥನೇ. ಲಂಚ ಹೊಡೆಯುವವರದ್ದೇ ಒಂದು ಜಾತಿ. ಅದನ್ನು ಒಪ್ಪಿಕೊಳ್ಳಬೇಕು. ಆದರೆ ಜಾತಿಯನ್ನೇ ಒಂದು ಆಯುಧವನ್ನಾಗಿ ಮಾಡಿ ಒಂದು ವರ್ಗವನ್ನು ಪ್ರಹರಿಸುವಂಥ ಮತ್ತು ಜಾತಿಯನ್ನೇ ಒಂದು ಆಯುಧವನ್ನಾಗಿ ಮಾಡಿ ಅದರಡಿಯಲ್ಲಿ ರಕ್ಷಣೆ ಮಾಡಿಕೊಳ್ಳುವಂಥಾದ್ದು ಅತ್ಯಂತ ದುರಾದೃಷ್ಟಕರವಾದುದು. ಯಾರಾದರೂ ಜಾತಿಯನ್ನೇ ಆಯುಧವನ್ನಾಗಿ ಮಾಡಿ ಬೇರೆ ಜಾತಿಯವರನ್ನು ಪ್ರಹರಿಸುವುದಕ್ಕೆ ಹೊರಟಾಗ, ಬೇರೆಯವರೂ ಸಹ ತಮ್ಮ ಜಾತಿಯನ್ನೇ ಅನಿವಾರ್ಯವಾಗಿ ಆಯುಧವನ್ನಾಗಿ ಉಪಯೋಗಿಸಬೇಕಾಗುತ್ತದೆ. ಇದು ಆಗಬಾರದೆನ್ನುವುದೇ ನನ್ನ ಮನಸ್ಸಿನಲ್ಲಿರುವ ಚಿಂತನೆ. ಅದನ್ನು ತಮ್ಮ ಮುಂದೆ ತೋಡಿಕೊಳ್ಳುತ್ತಿದ್ದೇನೆ. ಅಲ್ಲಿ ಎಷ್ಟಾದರೂ ಹಣ ಮತ್ತು ವಸ್ತುಗಳು ಸಿಗಲಿ, ಜಪ್ತಿ ಮಾಡಿಕೊಳ್ಳಲಿ. ಅವರನ್ನು ಕಾನೂನು ಪ್ರಕಾರ ಶಿಕ್ಷೆಗೆ ಗುರಿಪಡಿಸುವುದಕ್ಕೆ ಅನುಸರಿಸಬೇಕಾದ ವಿಧಾನಗಳನ್ನೆಲ್ಲ ಅನುಸರಿಸಲಿ. ಆದರೆ, ಹೆಣ್ಣುಮಕ್ಕಳ ಮೈಮೇಲಿರತಕ್ಕ ಮಂಗಳ ಸೂತ್ರವನ್ನು ಕಿತ್ತುಕೊಂಡು ಆಳತೆ ಮಾಡತಕ್ಕ ಹೇಯ ಕೃತ್ಯ ಮಾಡುವುದೇ? ಇದು ನಡೆದಿದೆ. ನಡೆದಿಲ್ಲ ವೆಂದು ಯಾರಾದರೂ ಸಮರ್ಥನೆ ಮಾಡಿಕೊಳ್ಳುವರೆ ? ಹಿಂದೂ ಧರ್ಮದಲ್ಲಿ ಮಹಿಳೆಯರು ಧರಿಸುವ ಮಂಗಳಸೂತ್ರವು ಬಹಳ ಪವಿತ್ರವಾದುದು. ಆ ಮಂಗಳಸೂತ್ರವನ್ನು ಕಿತ್ತುಕೊಂಡಿದ್ದಾರೆ. ಅದನ್ನು ಕೀಳದೆ ಒಂದು ತೊಲವಿದೆ ಎಂದು ಬರೆದುಕೊಳ್ಳಬಹುದಾಗಿತ್ತು. ಆದರೆ, ಅದನ್ನು ಕಿತ್ತುಕೊಂಡು ತೂಕ ಮಾಡುವ ಹೇಯಕೃತ್ಯ ಮಾಡಿದ್ದಾರೆಂದರೆ, ಇವರು ಸರಿಯಾದ ರೀತಿಯಲ್ಲಿ ಕಾರ್ಯಾಚರಣೆ ಮಾಡುತ್ತಿಲ್ಲ, ಅನುಸರಿಸುತ್ತಿರುವ ವಿಧಾನದಲ್ಲಿ ಎಲ್ಲೋ ಏನೋ ಲೋಪವಿದೆ ಎನ್ನುವ ಸಂಶಯಕ್ಕೆ ಎಡೆಕೊಡುತ್ತದೆ.

ಜಾತಿ ಪ್ರಶ್ನೆಯನ್ನು ಬಿಟ್ಟುಬಿಡೋಣ. ಇವರು ಬೇರೆ ಎಲ್ಲ ಇಲಾಖೆಗಳಿಗೂ ಸಂಬಂಧಪಟ್ಟಂತೆ ಕಾರ್ಯಾಚರಣೆಯನ್ನು ವಿಸ್ತಾರಗೊಳಿಸಿದ್ದರೆ ಮತ್ತು ಬೇರೆ ಅಂತಸ್ತುಗಳಲ್ಲಿ ಕೆಲಸ ಮಾಡುತ್ತಿರತಕ್ಕ ಉನ್ನತ ಅಧಿಕಾರಿಗಳ ಮೇಲೂ ಕಾರ್ಯಾಚರಣೆಯನ್ನು ವಿಸ್ತಾರಗೊಳಿಸಿದ್ದರೆ ಬಹುಶಃ ಇವರು ಮಾಡಿದಂಥ ಕಾರ್ಯಗಳೆನ್ನು ಪಂಂಕ್ತಿಕಂಠದಿಂದ ಹೊಗಳುತ್ತಿದ್ದೆವು. ಬರೀ ಪ್ರಚಾರಕ್ಕಾಗಿ ಮಾಡಿದಂಥ ಕೆಲಸ ಶಾಶ್ವತವಾಗಿ ಉಳಿಯುವುದಿಲ್ಲ. ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಯಾವುದಾದರೊಂದು ಪ್ರಾಮಾಣಿಕ ಕೆಲಸ ಮಾಡಿದರೆ ಅದು ಅವರಂ ದೇಶಕ್ಕೆ ಮಾಡಿದ ಅಮೂಲ್ಯ ಸೇವೆ ಎನ್ನಬಹುದು. ಆದರೆ, ಪ್ರಚಾರಕ್ಕಾಗಿ ಮತ್ತು ತೋರಿಕೆಗೆ ಮಾಡಿದರೆ ಅದಕ್ಕೆ ಮೂರು ಕಾಸಿನ ಗೌರವವನ್ನು ಯಾರೂ ಕೊಡಬಾರದು.

ಜಾಗೃತ ಆಯೋಗದ ವ್ಯಾಪ್ತಿಗೆ ಬರುವ ಅಧಿಕಾರಿಗಳ ಮನೆಯ ಮೇಲೆ ಮಾತ್ರ ಏತಕ್ಕೆ ದಾಳಿ ಮಾಡಬೇಕು ? ಲೋಕಾಯುಕ್ತ ಮಸೂದೆಯನ್ನು ದಯವಿಟ್ಟು ಜಾರಿಗೆ ತರಬೇಕು, ತಂದು ಶಾಸನ ಮಾಡಿ ಕನಿಷ್ಠ ಪಕ್ಷ ತಿಂಗಳಿಗೆ ಐವತ್ತು ಜನರ ಮನೆಗಳ ಮೇಲಾದರೂ ದಾಳಿ ಮಾಡಬೇಕು. ಆಗ ಎಷ್ಟು ಜನ ಸಿಕ್ಕಿಬೀಳುತ್ತಾರೆ, ಬೀಳುವುದಿಲ್ಲ—ಅದು ಬೇರೆ ವಿಚಾರ. ಆದುದರಿಂದ, ಭ್ರಷ್ಟಾಚಾರ ತೊಡೆದು ಹಾಕುತ್ತೇವೆಂದು ಕಣ್ಣು ಒರೆಸುವ ಪ್ರಚಾರ ಫಲ ಕೊಡುವುದಿಲ್ಲ. ಜಾಗೃತ ಆಯೋಗದವರ ಮೇಲೆ ನಿಮಗೆ ಅಧಿಕಾರವಿಲ್ಲವೆಂದು ನನಗೆ ಗೊತ್ತಿದೆ. ಆದರೆ ಸೂಚನೆ ಕೊಡತಕ್ಕ ಅಧಿಕಾರ ನಿಮಗಿದೆ. ನಿಮ್ಮ ನಡವಳಿಕೆ ಬಗ್ಗೆ ಸಂಶಯಗಳು ಹುಟ್ಟಿವೆ, ನಿಮ್ಮ ಕಾರ್ಯಾಚರಣೆ ಮತ್ತು ಕಾರ್ಯವಿಧಾನದ ಬಗ್ಗೆ ಪ್ರಶ್ನೆಗಳು ಎದ್ದಿವೆ ಎನ್ನುವ ವಿಚಾರವನ್ನು ಅವರಿಗೆ ತಿಳಿಸಬೇಕು ಮತ್ತು ಇನ್ನು ಮುಂದಾದರೂ ಅವರು ತಮ್ಮ ದಾರಿಯನ್ನು ಸರಿಪಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಹುಬ್ಬಳ್ಳಿ ಗ್ರಾಮಾಂತರ).—ಸ್ವಾಮಿ, ಮೊದಲನೆಯದಾಗಿ, ಒಂದು ತಿದ್ದುಪಡಿಯಾಗಬೇಕಾಗಿದೆ. ನಾನು ಮೊನ್ನೆ ಮಾತನಾಡಿದ ಕೆಲವು ವಿಚಾರಗಳು ಪತ್ರಿಕೆಗಳಲ್ಲಿ ನಿನ್ನೆ ದಿವಸ ಪ್ರಕಟವಾಗಿವೆ. ಅದರಲ್ಲಿ ''ಡೆಕ್ಕನ್ ಹೆರಾಲ್ಡ್'' ಪತ್ರಿಕೆಯಲ್ಲಿ ''There is rampant corruption in Vigilance Department'' ಎಂದು ವರದಿಯಾಗಿದೆ. ನಾನು ಆ ರೀತಿ ಹೇಳಲಿಲ್ಲ. ''There is rampant Corruption in all Departments'' ಎಂದು ಹೇಳಿದ್ದೆ. ಮತ್ತು ಅದರಂತೆ ಅದು ತಿದ್ದುಪಡಿಯಾಗಬೇಕಾಗಿದೆ. ಪತ್ರಿಕೆಯವರು ಇದನ್ನು ದಯ

ವಿಟ್ಟು ಗಮನಿಸಬೇಕೆಂದು ಹೇಳಬಯಸುತ್ತೇನೆ. Vigilance Commission is an autonomous body. ಮಾನ್ಯ ಕೃಷ್ಣಪ್ಪನವರು ಹೇಳಿದಂತೆ ಭ್ರಷ್ಟಾಚಾರ ಕಡಿಮೆಯಾಗಿ ಆಡಳಿತದಲ್ಲಿ ಸ್ವಚ್ಛತೆ ಬರುವ ದೃಷ್ಟಿಯಿಂದ ಅದು ಅತ್ಯವಶ್ಯ. ಅದರಲ್ಲೂ ಕೂಡ ಈ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಮೊಚ್ಚುಗೆ ವ್ಯಕ್ತ ಮಾಡಿದ್ದೇನೆ. ಜಾಗೃತ ಆಯೋಗಕ್ಕೆ sitting judge of the High Court. ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿರುವುದು ತುಂಬಾ ಸ್ವಾಗತಾರ್ಹವಾದುದು. ಈಗಿರುವ ಅಧ್ಯಕ್ಷರು ಬಂದಮೇಲೆ ಒಳ್ಳೆಯ ಕೆಲಸ ಮಾಡಿದ್ದಾರೆ, ಇಲ್ಲವೆಂದಲ್ಲ. ಅವರ ಬಗ್ಗೆ ನನ್ನಲ್ಲಿ ಗೌರವವಿದೆ. ಅವರು ಒಳ್ಳೆಯ ಹೆಸರು ಪಡೆದ ನ್ಯಾಯಾಧೀಶರಾಗಿದ್ದಾರೆ. ವೈಯಕ್ತಿಕವಾಗಿ ಯಾವ ಪ್ರಶ್ನೆಯೂ ಇಲ್ಲ. ದಾಳಿ ಮಾಡಿದ್ದರ ಬಗ್ಗೆ ನಾನು ಆತಂಕವನ್ನು ವ್ಯಕ್ತಮಾಡಿಲ್ಲ. ಜಾಗೃತ ಆಯೋಗವೆಂದರೆ ಅದರಲ್ಲಿರುವ ಕೆಲವು ನ್ಯಾಯಾಧೀಶರೇ ಅಲ್ಲ ಅತ್ಯಂತ ಮಹತ್ವ ವಿಭಾಗವಾಗಿರುವ investigation wing attached to Vigilance — ಇವರು ನಿಸ್ಪಕ್ಷಪಾತವಾಗಿ ಕೆಲಸ ಮಾಡಬೇಕಾಗುತ್ತದೆ. Investigation wing attached to vigilance- ಅವರು ರಾಜ್ಯದಲ್ಲಿ ಭ್ರಷ್ಟಾಚಾರ ನಿರ್ಮೂಲನ ಮಾಡುವ ದೃಷ್ಟಿಯಿಂದ ಸರ್ಕಾರದ ಎಲ್ಲ ಇಲಾಖೆಗಳನ್ನು ನೋಡಬೇಕಾಗುತ್ತದೆ. ನಾನು ನಿನ್ನೆ ದಿವಸ ಹೇಳಿದಂತೆ it is not the monopoly of any community or caste. ಎಲ್ಲ ಜಾತಿಗಳಲ್ಲೂ ಭ್ರಷ್ಟಾಚಾರಿಗಳಿದ್ದಾರೆ. ನನ್ನ ಗೆಳೆಯರು ಹೇಳಿದ ಹಾಗೆ it is omnipresent and omnipotent also. ಇದು ಎಲ್ಲ ಜಾತಿಗಳಲ್ಲೂ ಇದೆ. ಆದುದರಿಂದ, ಮಾನ್ಯ ಕೃಷ್ಣಪ್ಪನವರು ಹೇಳಿದ ವಿಚಾರಗಳನ್ನು ಬೆಂಬಲಿಸುತ್ತ, ಜಾಗೃತ ಆಯೋಗದ ತನಿಖಾ ವಿಭಾಗವು ನಿರ್ಭಯ ಮತ್ತು ನಿಷ್ಪಕ್ಷಪಾತವಾಗಿ ಯಾವ ಯಾವ ಇಲಾಖೆಗಳಲ್ಲಿ ಭ್ರಷ್ಟಾಚಾರಿಗಳಿದ್ದಾರೆ—ಅವರು ಯಾವುದೇ ಜಾತಿಗೆ ಸೇರಿರಲಿ—ಅವರ ಬಗ್ಗೆ ಸರಿಯಾದ ರೀತಿಯಲ್ಲಿ ತನಿಖೆ ಮಾಡಿ, ಅವರ ಮನೆಗಳ ಮೇಲೆ ದಾಳಿ ನಡೆಸಿ, ಬುಕ್ ಮಾಡತಕ್ಕ ಕಾರ್ಯ ಮಾಡಬೇಕು. ಇಲ್ಲದಿದ್ದರೆ, ಜಾಗೃತ ಆಯೋಗವನ್ನು ಸ್ವತಂತ್ರ ಮತ್ತು ಸ್ವಾಯತ್ತ ಸಂಸ್ಥೆ ಎಂದು ಮಾಡಿದಾಗ್ಯೂ ಕಾರ್ಯಾಚರಣೆಯಲ್ಲಿ ಅದು ಆಗದಿದ್ದರೆ, ಆಗ ಇದರ ಬಗ್ಗೆ ಜನರಿಗಿರುವ ನಂಬಿಕೆ ಹೋಗುತ್ತದೆ. ಈ ದೃಷ್ಟಿಯಿಂದ ಈ ಸಭೆಯ ಅಭಿಪ್ರಾಯವನ್ನು ಟೀಕೆ ಮಾಡಬೇಕೆಂದಿಲ್ಲ. ಕಾರ್ಯಾಚರಣೆ ಮಾಡುವಾಗ, ಸಂಶಯಾಸ್ಪದವಾಗುವ ರೀತಿಯಲ್ಲಿ ನಡೆದಿದೆ, ಈ ರಾಜ್ಯದ ಆಡಳಿತವನ್ನು ಸ್ವಚ್ಛ ಮಾಡುವ ದೃಷ್ಟಿಯಿಂದ, ಎಲ್ಲಾ ಕ್ಷೇತ್ರಗಳಿಗೂ ಹೆಬ್ಬತಕ್ಕ ಕಾರ್ಯವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಭ್ರಷ್ಟ ಅಧಿಕಾರಿಗಳ ಮನೆಗೆ ಪೋಲೀಸಿನವರು ಹೋದಾಗ, ಒಡವೆ ವಸ್ತುಗಳನ್ನು ತೆಗೆದುಕೊಳ್ಳುವಂತ ಸಂದರ್ಭದಲ್ಲಿ, ಪೋಲೀಸಿನವರು ಸೌಜನ್ಯದಿಂದ ವರ್ತಿಸಬೇಕಾಗುತ್ತದೆ. ಆದರಲ್ಲಿಯೂ ಮಹಿಳೆಯರ ವಿಚಾರದಲ್ಲಿ ಗೌರವದಿಂದ ನಡೆದುಕೊಳ್ಳಬೇಕಾಗುತ್ತದೆ. ರೈಡು ಮಾಡುವ ನೆಪದಲ್ಲಿ ಮಂಗಳಸೂತ್ರ ತೆಗೆದುಕೊಂಡಂತಹ ಅಧಿಕಾರಿಗಳಿಗೆ ತಕ್ಕ ಶಿಕ್ಷೆಯಾಗುವಂತೆ ತಕ್ಕ ಕ್ರಮ ಕೈಗೊಳ್ಳಬೇಕು. ಅಂತೆ ಹೀನಾಯವಾಗಿ ನಡೆದುಕೊಳ್ಳುವಂತ ಅಧಿಕಾರಿಗಳ ಬಗ್ಗೆಯೂ ಕೂಡ ವಿಚಾರಣೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ರಾಜಕೀಯ ಭ್ರಷ್ಟಾಚಾರದ ಬಗ್ಗೆ ಒಂದು ಮಾತು ಹೇಳುತ್ತೇನೆ. ಆದಷ್ಟು ಬೇಗ ಲೋಕಪಾಲ ಮಸೂದೆಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ನಮ್ಮ ಡಾಕ್ಟರ್ ತಿಮ್ಮೇಗೌಡರು ಖಾಸಗೀಯಾಗಿ ಒಂದು ಮಸೂದೆಯನ್ನು ತಂದಿದ್ದಾರೆ, ಅದಕ್ಕೆ ಬೇಕಾದರೆ ತಿದ್ದುಪಡಿಗಳನ್ನು ಮಾಡಿ, ಬೇಗ ತರಲಿಕ್ಕೆ ಪ್ರಯತ್ನ ಮಾಡಿ. ಈಗಾಗಲೇ ನಾವು ಶಾಸನ ಅಧಿವೇಶನದ ಮುಕ್ತಾಯ ಘಟ್ಟದಲ್ಲಿದ್ದೇವೆ, ತಾವು ಸುಗ್ರೀವಾಜ್ಞೆಯ ಮೂಲಕ ತಂದರೂ ಒಪ್ಪಿಕೊಳ್ಳುತ್ತೇನೆ. ಆದರೆ, ಸುಗ್ರೀವಾಜ್ಞೆ ತರುವುದಕ್ಕೆ ಮುನ್ನ ನಮ್ಮ ಅಭಿಪ್ರಾಯವನ್ನು ಕೇಳಬೇಕೆಂದು ಹೇಳುತ್ತೇನೆ. Leader of the Opposition should be consulated for appointing Chairman. ಛೇರ್ಮನ್ ಇದ್ದರೆ ಅಭಿಪ್ರಾಯ ಕೊಟ್ಟರೆ ಒಂದು ರೀತಿಯಲ್ಲಿ ಸರ್ಕಾರಕ್ಕೆ ಪ್ರತಿಕೂಲವಾಗುತ್ತಿತ್ತು. ಅಭಿಪ್ರಾಯ ಕೊಟ್ಟಮೇಲೆ ಏನು ಮಾಡಿದರು? ಸುಗ್ರೀವಾಜ್ಞೆ ತರುವಾಗ ವಿರೋಧ ಪಕ್ಷದ ನಾಯಕರನ್ನು ಕನ್‌ಸಲ್ಟ್ ಮಾಡಬೇಕೆನ್ನುವ ಕ್ಲಾಸನ್ನೇ ತೆಗೆದುಹಾಕಿದರು. ತಮಗೆ ಅನುಕೂಲವಾಗುವಂತೆ ಮಾಡಿಕೊಂಡರು, ಕೊನೆಗೆ ಲಕ್ಷ್ಮೀನಾರಾಯಣರವರು ರಿಟ್ ಹಾಕಿದರು, ಆ ರೀತಿ ಆಗದಂತೆ ಒಳ್ಳೆಯ ಕಾನೂನನ್ನು ಮಾಡಲಿಕ್ಕೆ, ವಿರೋಧ ಪಕ್ಷದವರ ಸಲಹೆಯನ್ನು ತೆಗೆದುಕೊಂಡು ಬೇಗ ಕಾನೂನು ತರಬೇಕೆಂದು ಒತ್ತಾಯ ಮಾಡುತ್ತೇನೆ.

† SRI C. M. ARUMUGHAM (K.G.F.).—Sir, I will not take much of the time of the House. We entirely agree with the Government with regard to the conducting of raids. If anybody has made disproportionate income and made property, well, the Government should take action. But what I feel is that instead of concentrating only on one department *i.e.*, PWD, it should be extended to Police Department also. This IPS Department and your wonderful IAS Department. Involve all these people like Excise Department, Industries Department. In Excise Department racket is going on.

A. MEMBER.—May I know what is IAS Department ?

SRI C. M. ARUMUGHAM.—I am sorry this is IAS and IPS cadre, because IAS is a separate department. Their department is superhuman-being department. I am asking why not the Police Department ? Everybody knows what is going on in the Police Department but there is no evidence, that is all the point. One inspector in Traffic has constructed a house for Rs. 6 lakhs in Kumara Krupa Extension. Are we not aware of it ? Therefore, let them conduct raids there also.

One important point I would like to bring to the notice of the Government and Mr. Veerappa Moily. Let them raid and take into account all properties but Mangala Sutra *i.e.*, Thali is very sacred. They cannot remove it for valuation and weighing. They want to remove thali from Ladies. You know what is Thali ? Once it is tied by her husband, it shall not be removed in her life time until her husband dies. They want to indulge in religious affairs Don't you have belief in Hindusim ? Are you not ashamed of it Mr. Veerappa Moily ? I can use any word to what Mr. H.T Krihnappa said. The Christians also get the Wedding Ring. They do not remove it. Even if a Christian become a pauper or a begger, he will neither remove it not pledge it. Whether they are Christians. Hindus or Muslims, they have got some sacred things, which should not be touched. Where is secularism in our country ? You call this Secular Government. Every Minister goes to temple. Even I have got a ring. I got this blue ring because I belong to Republican Party and the colour of its flag is blue What I am asking is, don't you have belief in this ? They want to touch women. I don't bother if they take other things to somewhere and calculate the value as they like. Even Hindu Gods want gold. Thirupathi god gets lot of gold. Thali is so sacred that you cannot remove it and weight. We must protest at this. Somebody here was saying. Where is that lady who always talks about women.

KUM. S. PRAMILA.—I am here.

SRI C. M. ARUMUGHAM.—You have not taken out any procession against this.

SRI S.M. SHEERNALY CHANDRASHEKAR.—She is not bothered about this since she is not having thali.

SRI C. M. IBRAHIM,—No thali is tied to her neck.

KUM. S. PRAMILA.—I request the hon. member Sri Arumugham to use the word 'mangala sutra' instead of 'thali'.

SRI C. M. ARUMUGHAM.—So, what is the law? You can ask your wonderful Vigilance Department for removing mangala sutra. Can anybody remove their wives' mangala sutras? Will they keep quiet? Have they studied Hindu philosophy or Christianity? You have given such a power to remove mangala sutra. If revolver is permitted to be used by the ladies, they would have shot dead so many officers who have entered their houses. There is one instance. One lady was there. The raiders went to her house and were opening all almirahs and cup-boards and other things. She never bothered. She was happy and even she was prepared to offer them coffee. When they asked her mangala sutra for weighing gold ornaments, she was stunned and fell down. For three or four days, she did not take meals. The sacredness of Thali is most important. Are the Ministers not Hindus? Don't they belive in Hinduism? How is that they have allowed? How are they to account for it? They call themeselves representatives of people and they also call Indians and most of them belong to Hinduism but still they allow these things. It is a monkery on the part of the Government to have allowed these officers to indulge in these activities.

If you raid the houses we do not care. But, can you do this? Even if you wear a ring they take it away. The Hindus have got a mentality to acquire gold from age-old. Some gold would have been given by the father-in-law like 10 tolas or 1 tola. In those days it costs Rs. 35. When I married 1 tola costs Rs. 50. Now 8 Gms. costs Rs. 1 300, and 10 Gms. costs Rs. 1,600. Can you calculate at to-day's rate? Is that the way you want to do it? It is a very sensitive issue. Is there anybody in this House who can say touching his heart what the Vigilance Department is doing *i.e.*, removing the Mangala Sutra is correct? Is there anybody? If anybody can say, before he says, he must touch his heart.

I was saying about gold weighing, Sir, there is a community called Vaishyas. They will not purchase lands. They will not purchase house. The moment they get money they go and purchase gold. They have been getting gold for the last

40 years or 50 years. Now, you want to raid the house, take the gold and calculate at to-day's rate. That is not correct. You do it, but do not calculate. If you have got solid cash, if you have got property, you do it, but not take carry gold. As I said when I was married the gold price for 10 Gms. was Rs 50. But to-day it is Rs. 1,600. Are you calculating at Rs. 1,600 ? You say Rs. 2 lakhs, 3 lakhs and Rs. 5 lakhs were found. Therefore, give proper account and proper valuation.

As I said, it must apply to all Departments, and not to any particular Department. Do not restrict the raids to any Department I was told that they prepared a list. While preparing a list they go and threaten. Why should they do it ? Therefore, I appeal to the Government to kindly consider this point. We have given powers. When more power is given they must be more careful in exercising the power. They cannot go mad. More power, it appears sometimes, becoms bad also. That is how the Department has become mad in behaving in this funny way. Please ask them to restrain themselves in exercising the powers and authority. Though the law is given, but still it must be carefully used, sparingly used and considering the religious sentiment. Mangala Sutra has got religious sentiment. It goes against the Hindu society. Therefore, Sir. this is the desire of this House to appeal to the Government that they must be very careful in tackling this delicate issue.

ಕುಮಾರಿ ಎಸ್. ಪ್ರಮೀಳ(ಚಾಮರಾಜಪೇಟೆ).—ಸನ್ಮಾನ್ಯ ಸಭಾಧ್ಯಕ್ಷರೆ. ಇದು ಬಹಳ ಗಂಭೀರವಾದಂಥ ವಿಷಯ. ಮಂಗಳಸೂತ್ರವನ್ನು ತೆಗೆದುಹಾಕುವುದು ಎನ್ನುವಂತಾದ್ದು ಖಂಡಿತವಾಗಿಯೂ ಹಿಂದೂ ಸಮಾಜದಲ್ಲಿ ಪ್ರತಿಯೊಬ್ಬರಿಗೂ ದುಃಖಕರವಾದ ವಿಷಯ. ನಾವು ನೋಡಬೇಕಾದ್ದು ಏನು ಎಂದರೆ, ನಮ್ಮ ವಿಜಿಲೆನ್ಸ್ ಕಮಿಷನ್ ರೂಲ್ಸ್‌ನಲ್ಲಿ ಏನಿದೆ, ಇದರಲ್ಲಿ ನಾವು ಏನಾದರೂ ತೂಕ ಮಾಡಬೇಕಾದರೆ, ಮಂಗಳಸೂತ್ರವನ್ನು ತೆಗೆದುಕೊಂಡು ತೂಕ ಮಾಡುವುದಕ್ಕೆ ಅಧಿಕಾರ ಇದೆಯೇ ? ಈ ಅಧಿಕಾರವನ್ನು ಏನಾದರೂ ವಿೂರಿ ಅವರು ಕೆಲಸ ಮಾಡಿದ್ದಾರೆಯೇ ? ಅದನ್ನು ನಾವು ಇವೊತ್ತಿನ ದಿವಸ ಪರಿಶೀಲನೆ ಮಾಡಬೇಕಾಗಿದೆ. ಒಂದು ವೇಳೆ ನಾವೇ ಅವರಿಗೆ ಈ ಅಧಿಕಾರ ಇವೆಲ್ಲವನ್ನೂ ಕೊಟ್ಟಿದ್ದು ಅವರು ಅದನ್ನು ಮಾಡಿದ್ದರು ನಾವು ಮಾಡತಕ್ಕದ್ದು ಸರಿಯಾಗಿ ಕಾಣುವುದಿಲ್ಲ. ಅದರ ಬಗ್ಗೆ ಸೂಕ್ತವಾದ ಬದಲಾವಣೆ ಮಾಡಬೇಕಾದ್ದು ಅತಿ ಅವಶ್ಯಕ ಇದೆ. ಅದರ ಬಗ್ಗೆ ನಾವು ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ. ನಮ್ಮ ಮಾನ್ಯ ಬೊಮ್ಮಾಯಿಯವರು, ಮಾನ್ಯ ಆರ್ಮುಗಮ್ ಅವರು ಹೇಳಿದರು. ಇವೊತ್ತು ನಾವು ಮಹಿಳೆಯರು ವಿಜಿಲೆನ್ಸ್ ಕಮಿಷನರ್ ಬಂದರು ಅಂತ ಹೇಳಿ ತನ್ನ ಗಂಡ ಮಾಡಿರತಕ್ಕಂಥ ಭ್ರಷ್ಟಾಚಾರ, ಲಂಚ ತೆಗೆದುಕೊಂಡಿದ್ದನ್ನು ಮುಚ್ಚಿಡುವುದಕ್ಕೆ ಎಂದೂ ಕೂಡ ಪ್ರಯತ್ನ ಮಾಡಬಾರದು. ಅದನ್ನು ಮಾಡುವುದಕ್ಕೆ ನಾವು ಮಹಿಳೆಯರು ಎಂದೂ ಉತ್ತೇಜನ ಕೊಡುವುದಿಲ್ಲ. ಆ ರೀತಿ ಅವರು ಏನಾದರೂ ಅಡ್ಡ ಬಂದರೆ ನಾವು ದಯವಿಟ್ಟು ಮುಂದೆಬಂದು ನೀವು ಮಾಡುತ್ತಿರುವುದು ತಪ್ಪು ಎಂದು ಹೇಳುವುದಕ್ಕೆ ನಾವು ಮಹಿಳೆಯರು ಸಿದ್ಧರಿದ್ದೇವೆ. ಲಂಚ ಆಗಬಾರದು ಅಂತ ಹೇಳಿ, ಹಿಂದೆ ಆಯ್ದಕ್ಕಿ ಮಾರಯ್ಯನ ಕಾಲದಲ್ಲಿ ಆಗಿದ್ದಂಥ ಲಕ್ಷ್ಮಮ್ಮನವರು ಹೇಳಿದ್ದಾರೆ. 'ಆಯ್ದಕ್ಕಿ ಮಾರಯ್ಯ ತನ್ನ ಜೀವನ ಮಾಡುವಂಥ ಸಂದರ್ಭದಲ್ಲಿ ತನ್ನ ಗಂಡ ಒಂದು ವಾಡಕ್ಕೆ ಆಗುವಷ್ಟು ಆಯ್ಕೆ ಮಾಡಿ ತಂದಿದ್ದಕ್ಕೆ ಆಕೆ ತನ್ನ ಗಂಡನಿಗೆ ಹೇಳುತ್ತಾಳೆ" ಈಸಕ್ಕಿಯ ಮೇಲೆ ಪ್ರೀತಿ ನಿನಗೇಕೆ ಬಂತು, ಇದು ಮಾರಯ್ಯನಿಗೆ ಒಪ್ಪತಕ್ಕದ್ದಲ್ಲ. ನಾಳೆ ಅನ್ನುವುದನ್ನು ನೆನೆಸಬಾರಡು'

ಎಂದೇ ಹೇಳುತ್ತಾಳೆ. ಇವೊತ್ತು ಪ್ರತಿಯೊಬ್ಬ ಮಹಿಳೆ ಏನಾದರೂ ಒಂದನ್ನು ಹೆಚ್ಚಿಗೆ ತೆಗೆದುಕೊಂಡು ಬಂದರೆ ನಿನಗೆ ಇದು ಎಲ್ಲಿಂದ ಬಂತು ಎಂದು ಕೇಳಬೇಕಾದ ಪರಿಸ್ಥಿತಿ ಬಂದಿದೆ. ಲಂಚಾವತಾರ. ಭ್ರಷ್ಟಾಚಾರ ಹೋಗಬೇಕಾದರೆ, ಗಂಡಸು ಮಾಡತಕ್ಕದನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ನಮ್ಮ ಮಾನ್ಯ ಬೊಮ್ಮಾಯಿಯವರು ಮಹಿಳೆಯರು ಗೌರವಸ್ಥರು ಎಂದು ಹೇಳಿದರು. ಖಂಡಿತ ಅವರು ಗೌರವಸ್ಥ ಕುಟುಂಬದಿಂದ ಬಂದಿರುತ್ತಾರೆ. ಅವರು ಕೂಡ ಮಹಿಳೆಯರಾಗಿರುತ್ತಾರೆ. ಅವರೂ ಕೂಡ ಸಂಪೂರ್ಣ ಸಹಕಾರವನ್ನು ಲಂಚಾವತಾರ ತೆಗೆದು ಹಾಕುವುದರಲ್ಲಿ ಮಹಿಳೆಯವರು ಸಹಕಾರ ಕೊಡಬೇಕೆಂದು ನಾನು ಕರೆಕೊಡುತ್ತೇನೆ. ಇವೊತ್ತಿನದಿವಸ ಪ್ರತಿಯೊಂದು ಡಿಪಾರ್ಟ್‌ಮೆಂಟ್ ನಲ್ಲಿ ರೈಡ್ ಆಗುತ್ತಿದೆ. ಪ್ರತಿಯೊಂದು ಕಮ್ಯುನಿಟಿಯಲ್ಲೂ ರೈಡ್ ಆಗುತ್ತಿದೆ. ನಾವು ಈ ಸಂದರ್ಭದಲ್ಲಿ ಒಂದು ಸಂತೋಷವನ್ನು ವ್ಯಕ್ತಪಡಿಸಬೇಕಾಗಿದೆ. ಒಬ್ಬ ಹೈಕೋರ್ಟ್ ನ್ಯಾಯಾಧೀಶರು ಈ ಸಂದರ್ಭದಲ್ಲಿ ಕೆಲಸಕ್ಕೆ ಬಂದ ನಂತರ ವಿಜಿಲೆನ್ಸ್ ಆಫೀಸ್ ಇದೆ ಎನ್ನುವುದನ್ನು ಕರ್ನಾಟಕ ರಾಜ್ಯದಲ್ಲಿ ಮಾದರಿಯಾಗಿ ತೋರಿಸಿದ್ದಾರೆ. ಇಡೀ ಭಾರತ ದೇಶ ಕರ್ನಾಟಕದ ಕಡೆ ನೋಡುತ್ತಿದ್ದಾರೆ. ಬಹಳ ಒಳ್ಳೆಯ ಕೆಲಸವನ್ನು ಕರ್ನಾಟಕದಲ್ಲಿ ಮಾಡುತ್ತಿದ್ದಾರೆ. ಈ ಕೆಲಸವನ್ನು ನಾವು ಕೂಡ ಏತಕ್ಕೆ ಮಾಡಬಾರದು ಎನ್ನುವ ದೃಷ್ಟಿಕೋನದಲ್ಲಿ ನೋಡುತ್ತಿದ್ದಾರೆ. ಅಂತ ಸಂದರ್ಭದಲ್ಲಿ ಅವರು ಮಾಡತಕ್ಕ ಕೆಲಸಗಳನ್ನು ನಾವು ಒಂದು ಬೇರೆ ದೃಷ್ಟಿಕೋನದಲ್ಲಿ ನೋಡುವುದು ಅಪಾಯವಾಗಬಹುದು, ಅವರು ಮಾಡುವ ಕೆಲಸ ಸ್ಥಗಿತಗೊಳಿಸಬೇಕು. ಆದುದರಿಂದ, ಇದರ ಬಗ್ಗೆ ಅಷ್ಟು ಕಠಿಣಕರವಾಗಿ ಹೋಗದೆ, ಇನ್‌ವೆಸ್ಟಿಗೇಷನ್‌ನಲ್ಲಿ ಏನಾದರೂ ತಪ್ಪಾಗುವುದು ಇದ್ದರೆ, ಮಾರ್ಗದರ್ಶನ ಕೊಡೋಣ. ನಾನು ಕೆಲವು ಮನೆಗಳಲ್ಲಿ ಬೀರುಗಳಲ್ಲಿ ಒಂದು ಸಾವಿರಕ್ಕೂ ಮಿಗಿಲಾಗಿ ಸೀರೆಗಳು ಇಟ್ಟಿದ್ದನ್ನು ಕೇಳಿದ್ದೇನೆ. ಇವೊತ್ತಿನ ದಿವಸ ಒಬ್ಬ ಅಧಿಕಾರಿಯ ಮನೆಯಲ್ಲಿ ಒಬ್ಬ ಮಹಿಳೆ ಒಂದು ಸಾವಿರಕ್ಕಿಂತಲೂ ಹೆಚ್ಚಾಗಿ ಸೀರೆಗಳನ್ನು ಇಟ್ಟುಕೊಳ್ಳಬೇಕಾದರೆ ಅವರು ಐ.ಎ.ಎಸ್. ಅಧಿಕಾರಿಯಾಗಿರಲಿ, ಒಬ್ಬ ಇಂಜಿನಿಯರ್ ಆಗಿರಲಿ, ಇಟ್ಟುಕೊಳ್ಳುವುದಕ್ಕೆ ಸಾಧ್ಯವಿದೆಯೇ ? ಅವರಿಗೆ ಬರತಕ್ಕ ಆದಾಯದಲ್ಲಿ ಈ ಕೆಲಸವನ್ನು ಮಾಡಲಿಕ್ಕೆ ಸಾಧ್ಯವಿದೆಯೇ ಎಂದು ನೋಡಿದಾಗ ಒಬ್ಬ ಮಹಿಳೆ ಎನ್ನುವ ನೆಪಮಾತ್ರದಿಂದ ಅವರ ಸೀರೆಯನ್ನು ತೆಗೆದು ಎಣಿಸಬಾರದು, ಅವರ ಕೈಯಲ್ಲಿ ಹಾಕಿರತಕ್ಕ ಬಳೆ ತೆಗೆದು ಎಣಿಸಬಾರದು, ಅವರು ಹಾಕಿರತಕ್ಕ ಬಳೆ ತೆಗೆದು ತೂಕ ಮಾಡಬಾರದು. ಇದು ಖಂಡಿತ ಸಾಧುವಾದುದಲ್ಲ. ನಾವು ಇನ್‌ವೆಸ್ಟಿಗೇಷನ್ ಸಂದರ್ಭದಲ್ಲಿ ಸಂಪೂರ್ಣವಾದ ಸಹಕಾರ ಕೊಡಬೇಕಾದುದು ನಮ್ಮ ಕರ್ತವ್ಯ. ಅವರು ತಪ್ಪಿಸ್ಥರಲ್ಲ ಎನ್ನುವುದನ್ನು ಕಾನೂನು ನೋಡಿಕೊಳ್ಳುತ್ತದೆ. ಕೋರ್ಟ್ ಅವರಿಗೆ ಯಾವ ರೀತಿ ಮಾಡಬೇಕೋ ಅದನ್ನು ಕೊಡುತ್ತದೆ. ಆದುದರಿಂದ, ಇನ್‌ವೆಸ್ಟಿಗೇಷನ್ ಸಂದರ್ಭದಲ್ಲಿ ಮಂಗಳ ಸೂತ್ರ ತೆಗೆಯತಕ್ಕದ್ದು ಒಳ್ಳೆಯದಲ್ಲ ಮಂಗಳಸೂತ್ರ ಪವಿತ್ರವಾದುದು. ಅದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI K. BHASKAR NAIDU.—Sir, a Member who does not know much about Mangala Sutra talks. But. here is a lady who has known the value of Mangala Sutra.

ಕುಮಾರಿ ಪ್ರಮೀಳ.—ಅಧ್ಯಕ್ಷರೆ, ಮಾನ್ಯ ಭಾಸ್ಕರ್‌ನಾಯ್ಡು ಮಂತ್ರಿ ಇತರೇ ಸದಸ್ಯರು ನಾನು ಏನು ಹೇಳಿದರು ಅದಕ್ಕೆ ಅವರು ಮತ್ತೆ ಏನಾದರೂ ಹೇಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಾನು ಇವೊತ್ತಿನ ದಿವಸ ಅವರಿಗೆ ಹೇಳುತ್ತಿದ್ದೇನೆ. ಮಾಂಗಲ್ಯ ಸೂತ್ರ ಮುತ್ತೈದೆಗೆ ಇರತಕ್ಕಂತಾದ್ದು. ಕನ್ಯಾ ಅಂತ ಹೇಳಿದರೆ ಕನ್ಯಾಮುತ್ತೈದೆ ಅಂತ. ನಾನು ವಿಧವೆಯಾಗುವುದಕ್ಕೆ ಅವಕಾಶವಿಲ್ಲ. ದಯವಿಟ್ಟು ಅವರು ತಿಳಿದುಕೊಳ್ಳಬೇಕು ನಾನು ಜೀವನಪರ್ಯಂತ ಕನ್ಯಾಮುತ್ತೈದೆಯಾಗಿ ಬಾಳುವುದಕ್ಕೆ ಇಷ್ಟಪಡುತ್ತೇನೆಂದು ಹೇಳುತ್ತೇನೆ.

ಶ್ರೀಮತಿ ಸುಶೀಲ ಚೆಲುವರಾಜ್ (ಹೆಗ್ಗಡದೇವನ ಕೋಟೆ).—ಸನ್ಮಾನ್ಯ ಸಭಾಧ್ಯಕ್ಷರೆ ಈಗಾಗಲೇ ಇದರ ಬಗ್ಗೆ ಪ್ರಮೀಳ ಅವರು ಮಾತನಾಡಿದ್ದಾರೆ. ಅವರು ಮದುವೆ ಆಗದಿದ್ದರೂ ಹೆಂಗಸರ ಪರವಾಗಿ ತಂಬಾ ಕಾಳಜಿ ವಹಿಸಿ ಮಾತನಾಡುತ್ತಾರೆ. ಮಂಗಳ ಸೂತ್ರ ಅವರಿಗೆ ಕಟ್ಟಿಲ್ಲದೇ ಇರಬಹುದು. ಮಹಿಳೆಯ ಮಂಗಳ ಸೂತ್ರದ ಮಹತ್ವ ಅವರಿಗೆ ಗೊತ್ತಿದೆ. ಅವರು ಮಾತನಾಡುವಾಗ

ಸಾಕಷ್ಟು ಹೇಳಿದ್ದಾರೆ. ನಾನು ಹೇಳುವುದು ಇಷ್ಟೆ, ಯಾವ ಪುರುಷರು ಸಹ ಲಂಚ ತೆಗೆದುಕೊಂಡು ಮಂಗಳಸೂತ್ರ ಕಟ್ಟಿದ್ದಾನೆ ಎಂದು ನನಗೆ ಅನ್ನಿಸುವುದಿಲ್ಲ. ಮದುವೆ ಆಗುವ ಮೊದಲು ಅವರು ಕೆಲಸದಲ್ಲಿ ಇರುತ್ತಾರೋ ಇಲ್ಲವೋ. ಮಂಗಳ ಸೂತ್ರ ಬಹಳ ಪವಿತ್ರವಾದುದು. ಅದನ್ನು ಬೇರೆ ಯವರಿಗೆ ಕೊಡಲೇ ಬಾರದು. ಹಿಂದಿನ ಕಥೆಗಳಲ್ಲಿ ಏನಿದೆ ಎಂದರೆ, ಹಿಂದೆ ಅದಕ್ಕೆ ಎಷ್ಟು ಪ್ರಾಶಸ್ತ್ಯ ಕೊಟ್ಟಿದ್ದರು ಎಂದರೆ ಮಂಗಳ ಸೂತ್ರ ಗಂಡನ ಕಣ್ಣಿಗೆ ಮಾತ್ರ ಕಾಣುತ್ತಿತ್ತು. ಬೇರೆಯವರಿಗೆ ಅದು ಕಾಣುತ್ತಾ ಇರಲಿಲ್ಲ ಅಂತ ಹೇಳುತ್ತಾರೆ. ಆದುದರಿಂದ, ಅವರು ಮಂಗಳ ಸೂತ್ರವನ್ನು ಏನಾದರೂ ಮಾಡಿಕೊಳ್ಳಲಿ ವಿಜಿಲೆನ್ಸ್ ಕಮಿಷನರ್ ಅವರು ಹೋದಾಗ ಅದನ್ನು ಮುಟ್ಟುವುದಾಗಲಿ, ಅದನ್ನು ತೆಗೆಸಿ ತೂಕ ಮಾಡುವುದಾಗಲಿ ಇದು ಬಹಳ ಕೆಟ್ಟ ಕೆಲಸ ಎಂದು ನಾನು ಈ ಸಂದರ್ಭದಲ್ಲಿ ಹೇಳುವು ದಕ್ಕೆ ಇಷ್ಟಪಡುತ್ತೇನೆ.

೫-೦೦ ಪಿ.ಎಂ.

ಶ್ರೀ ಎಂ. ವೀರಪ್ಪಮೊಯ್ಲಿ (ಮಾನ್ಯ ಹಣಕಾಸಿನ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ವಿಜಿಲೆನ್ಸ್ ಕಮಿಷನ್‌ನವರು ಮಾಡತಕ್ಕ ಕೆಲಸದ ವಿಚಾರದಲ್ಲಿ ಮಾನ್ಯ ಸದಸ್ಯರಾದ ಆರ್ಮುಗಂರವರು ಮಾನ್ಯ ಕೃಷ್ಣಪ್ಪನವರು, ಮಾನ್ಯ ಬೊಮ್ಮಾಯಿಯವರೂ ಕೆಲವು ವಿಚಾರಗಳನ್ನು ಹೇಳಿದರು. ಈ ವಿಜಿಲೆನ್ಸ್ ಕಮಿಷನ್ ಆಟಾನಮಸ್ ಬಾಡಿ. ವಿಜಿಲೆನ್ಸ್ ಕಮಿಷನ್‌ನವರಾದ ಹೈ ಕೋರ್ಟ್ ನ್ಯಾಯಾ ಧೀಶರೊಬ್ಬರು ಇದ್ದಾರೆ. ಅವರು ಬಂದಮೇಲೆ ಶ್ರೀಮತಿ ಪ್ರಮೀಳಾರವರು ಹೇಳಿದಂತೆ ಕರ್ನಾಟಕ ರಾಜ್ಯದಲ್ಲಿ ಈ ವಿಜಿಲೆನ್ಸ್ ಕಮಿಷನ್ ಇದೆ ಎಂಬುದು ಜನರಿಗೆ ಗೊತ್ತಾಗಿದೆ. ನಮ್ಮ ಸರ್ಕಾರ ಕೂಡ ಈ ವಿಜಿಲೆನ್ಸ್‌ಗೆ ಯಾವ ಮಾನ್ಯತೆ ಕೊಡಬೇಕೋ, ಯಾವ ಗೌರವ ಸ್ಥಾನವನ್ನು ಕೊಡಬೇಕೋ, ಕೊಡುತ್ತಿದ್ದೇವೆ. ಅವರು ಮಾಡತಕ್ಕ ತನಿಖೆ ಮತ್ತು ಅವರು ಕೊಡತಕ್ಕ ವರದಿ ಪ್ರಕಾರ ಡಿಸ್‌ಮಿಸ್ ಮಾಡಬೇಕಾದರೆ ಅದನ್ನೂ ಕೂಡ ಮಾಡುತ್ತಿದ್ದೇವೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಬೆಳಿಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಕರ್ನಾಟಕ ರಾಜ್ಯದ ಅಧಿಕಾರಿಗಳ ಮಟ್ಟಿಗೆ ಇದು ಹೊಸ ಪ್ರಯೋಗ ವಾಗಿರಬಹುದು. ಅಥವಾ ಅಧಿಕಾರಿಗಳ ಮಟ್ಟಿಗೆ ಇದು ಭೂತ ಅಥವಾ ಒಂದು ದೊಡ್ಡ ಪೆಡಂಭೂತ ವಾಗಿ ಪರಿಣಮಿಸಿರಬಹುದು. ಕರ್ನಾಟಕದ ಹಿತದೃಷ್ಟಿಯಿಂದ ಇದು ಬಹಳ ಒಳ್ಳೆಯದು. ಸ್ವಚ್ಛ ಆಡಳಿತವನ್ನು ಕೊಡಬೇಕೆಂದು ನಮ್ಮ ಸರ್ಕಾರ ಏನು ಹೇಳುತ್ತಾ ಬಂದಿದೆ ಆ ಧ್ಯೇಯ, ಧೋರಣೆಗೆ ಅನುಸಾರವಾಗಿ ಕೆಲಸ ಮಾಡುತ್ತಿದೆ ಇದರಲ್ಲಿ ಸರ್ಕಾರದ ಹಸ್ತಕ್ಷೇಪವಿಲ್ಲ. ಹೈ ಕೋರ್ಟ್ ನ್ಯಾಯಾಧೀಶರು ಎಲ್ಲಿ ಕ್ರೆಡಿಬಲ್ ಇನ್‌ಫರ್ಮೇಷನ್ ಸಿಕ್ಕುತ್ತದೆ ಅಥವಾ ಎಲ್ಲಿ ಆಧಾರ ಸಿಕ್ಕುತ್ತದೆ ಅಲ್ಲಿ ಹೋಗಿ ಧಾಳಿ ಮಾಡಿದ್ದಾರೆ. ಕಳೆದ ತಿಂಗಳಿಂದ ಈಚೆಗೆ ೨೪ ಅಧಿಕಾರಿಗಳ ಮನೆಗಳ ಮೇಲೆ ಧಾಳಿಗಳನ್ನು ಮಾಡಿದ್ದಾರೆ ಈ ಧಾಳಿಯ ಪಟ್ಟಿಯನ್ನು ನೋಡಿದರೆ.....

ಶ್ರೀ ಹೆಚ್.ಟಿ. ಕೃಷ್ಣಪ್ಪ.—ನಾನು ಹೈಕೋರ್ಟ್ ನ್ಯಾಯಾಧೀಶರ ಬಗ್ಗೆ ಆಗಲಿ, ಅಥವಾ ಜಾಗೃತ ಆಯೋಗದ ಅಧ್ಯಕ್ಷರ ಬಗ್ಗೆ ಆಗಲಿ ಹೇಳಲಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ನಾನು ಪೂರ್ಣವಾಗಿ ಉತ್ತರವನ್ನು ಹೇಳಿ ಮುಗಿಸಿದ ಮೇಲೆ ತಾವು ಮಾತನಾಡಿ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ವಿಜಿಲೆನ್ಸ್ ಕಮಿಷನ್‌ನವರು ನಡೆಸಿದಂಥ ಧಾಳಿಯಿಂದ ಜನಸಾಮಾನ್ಯರಿಗೆ ತೊಂದರೆಯಾಗಿದೆ, ಅಥವಾ ಪೀಡನೆಯಾಗಿದೆ ಅಥವಾ ಇನ್ನು ಯಾವುದೇ ರೀತಿಯ ಅನ್ಯಾಯವಾಗಿದೆ ಎಂದು ತಾವು ಯಾವಾಗ ಹೇಳಬೇಕೆಂದರೆ, ಈ ಧಾಳಿಯನ್ನು ಅನಾವಶ್ಯಕ ವಾಗಿ ಮಾಡಿದ್ದರೆ, ಅಥವಾ ಧಾಳಿ ಮಾಡಿದಾಗ ಯಾವಾ ಆಧಾರಗಳೂ ಸಿಕ್ಕಿಲ್ಲದಿದ್ದರೆ ಆಗ ನಿಮ್ಮ ಮನಸ್ಸಿನಲ್ಲಿರುವ ಶಂಕೆ ಸರಿಯಾದುದೆಂದು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಆ ರೀತಿ ಇಲ್ಲಿ ನಡೆದಿಲ್ಲ. ನಡೆದಿರುವ ಶಂಕೆ ಸರಿಯಾದುದೆಂದು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಆ ರೀತಿ ಇಲ್ಲಿ ನಡೆದಿಲ್ಲ. ನಡೆದಿರುವುದಕ್ಕೆ ೨೪ ಧಾಳಿಗಳ ಪೈಕಿ ೨ ಧಾಳಿಗಳಲ್ಲಿ ಮಾತ್ರ ಏನೂ ಸಿಕ್ಕಿಲ್ಲ. ಆದರೆ ಇನ್ನುಳಿದ ೨೨ ಪ್ರಕರಣ ಗಳಲ್ಲಿ ಸಾಕಷ್ಟು ಹೊಲ ಸಿಕ್ಕಿದೆ. ಸಾಕಷ್ಟು ಆಭರಣ ನಗದು ಹಣ, ಸಿಕ್ಕಿದೆ ಅಂದರೆ ನೂರಕ್ಕೆ ತೊಂಭತ್ತು ರಷ್ಟು ನಮಗೆ ಯಶಸ್ಸು ಸಿಕ್ಕಿದೆ. ಅಂದರೆ ಈ ದಿಸೆಯಲ್ಲಿ ವಿಜಿಲೆನ್ಸ್ ಅಧಿಕಾರಿಯಾಗಲಿ ಅಥವಾ ಅವರ ಅಧೀನದಲ್ಲಿರತಕ್ಕ ಅಧಿಕಾರಿಗಳಾಗಲಿ ತಾವು ಧಾಳಿ ನಡೆಸುವುದಕ್ಕೆ ಮುಂಚಿತವಾಗಿ ಸಾಕಷ್ಟು ಮುಂಜಾಗರೂಕತೆಯನ್ನು ವಹಿಸಿ ಮಾಹಿತಿಯನ್ನು ಪಡೆದು ಧಾಳಿ ಮಾಡಿದ್ದಾರೆ. ಆದರೆ ಯಾವುದೇ ರೀತಿಯ ದುರುದ್ದೇಶವೂ ಈ ಧಾಳಿಯಲ್ಲಿ ಅಡಗಿಲ್ಲ. ಇದನ್ನು ಸದುದ್ದೇಶದಿಂದಲೇ ಮಾಡಿದ್ದಾರೆ ಈ ೨೨ ಪ್ರಕರಣಗಳಲ್ಲಿ ಸಾಕಷ್ಟು ಅಧಿಕಾರಗಳು ನಮಗೆ ಸಿಕ್ಕಿರುವುದೇ ಇದಕ್ಕೆ ಸಾಕ್ಷಿ ಎಂದು ನಾನು ತಮಗೆ ಹೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ ಹೇಳುವುದಾದರೆ ಈ ಧಾಳಿ ಕೇವಲ ಲೋಕೋಪಯೋಗಿ ಇಲಾಖೆ ಬಗ್ಗೆ ಮಾತ್ರ ಸೀಮಿತವಾಗಿಲ್ಲ. ಒಂದು ವೇಳೆ ಯಾರಾದರೂ ಆ ರೀತಿ ತಿಳಿದುಕೊಂಡಿದ್ದರೆ ಅದು ತಪ್ಪು ಅಭಿಪ್ರಾಯ. ಈ ೨೪ ಪ್ರಕರಣಗಳಿಗೆ ಸಂಬಂಧಪಟ್ಟಂತೆ ನೋಡುವುದಾದರೆ ಇದರಲ್ಲಿ ನೀರಾವರಿಗೆ ಸಂಬಂಧಪಟ್ಟ ಅಧಿಕಾರಿಗಳಿದ್ದಾರೆ, ಪ್ರಿವೆನ್‌ಷನ್ ಆಫ್ ಅಂಡರ್ ವ್ಯಾಲ್ಯೂಯೇಷನ್ ಆಫ್ ಲ್ಯಾಂಡ್ಸ್‌ನ ಅಧಿಕಾರಿಗಳಿದ್ದಾರೆ, ಆರೋಗ್ಯ ಇಲಾಖೆ ಅಧಿಕಾರಿಗಳಿದ್ದಾರೆ, ಛೀಫ್ ಇನ್‌ಸ್ಪೆಕ್ಟೊರೇಟ್ ಆಫ್ ಬಾಯ್ಲರ್ಸ್‌ನ ಅಧಿಕಾರಿಗಳಿದ್ದಾರೆ, ಕೈಗಾರಿಕಾ ಇಲಾಖೆಯ ಅಧಿಕಾರಿಗಳಿದ್ದಾರೆ, ವಾಣಿಜ್ಯ ಇಲಾಖೆ ಅಧಿಕಾರಿಗಳಿದ್ದಾರೆ, ಫಾರೆಸ್ಟ್ ಇಲಾಖೆ ಅಧಿಕಾರಿಗಳಿದ್ದಾರೆ, ಟ್ರಾನ್ಸ್‌ಪೋರ್ಟ್ ಇಲಾಖೆ ಅಧಿಕಾರಿಗಳಿದ್ದಾರೆ. ವಿಲೇಜ್ ಅಕೌಂಟೆಂಟ್ಸ್ ಇದ್ದಾರೆ, ಹಾಗೆಯೇ ಇನ್ನೂ ಅನೇಕ ಇಲಾಖೆಗೆ ಸಂಬಂಧ ಪಟ್ಟವರಿದ್ದಾರೆ. ಈ ಧಾಳಿ ಕೇವಲ ಲೋಕೋಪಯೋಗಿ ಇಲಾಖೆಗೆ ಮಾತ್ರ ಸೀಮಿತವಲ್ಲ. ಇದು ಎಲ್ಲ ಇಲಾಖೆಗಳ ಅಧಿಕಾರಿಗಳ ಮನೆಗಳ ಮೇಲೂ ಧಾಳಿ ಮಾಡುತ್ತದೆ

ಶ್ರೀ ಎಸ್. ಆರ್. ಬೊಮ್ಮಾಯಿ.— ಪತ್ರಿಕೆಗಳಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧ ಪಟ್ಟಂತೆ ಮಾತ್ರ ಬರುತ್ತಿವೆ. ಇನ್ನುಳಿದ ಇಲಾಖೆಗಳ ಹೆಸರುಗಳು ಬರುತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—He is imputing a motive by telling that Vigilance Commission seems to have been biased against the P.W.D. ಮಾನ್ಯ ಸದಸ್ಯರಾದ ಆರ್ಯಗಂಧವರು ಮಾತನಾಡುತ್ತಾ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಹತ್ತಿರ ಹೋಗಿಲ್ಲವೆಂದು ಹೇಳಿದರು. ಅಂದರೆ ಅವರಿಗೆ ನಾನಾದರೂ ಹೇಳಬಯಸುವುದೇನೆಂದರೆ, ಈ ಧಾಳಿ ಮಾಡುವ ಕೆಲಸ ಇಲ್ಲಿಗೇ ನಿಂತಿಲ್ಲ, it is a continuing process.

(SMT. PRAMILA in the Chair)

ತಮ್ಮ ಹತ್ತಿರ ಯಾವುದಾದರೂ ಮಾಹಿತಿಗಳಿದ್ದರೆ ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಯವರಿಗಾಗಲಿ, ವಿಜಿಲೆನ್ಸ್ ಕಮಿಷನರ್‌ನವರಿಗಾಗಲಿ, ಅಥವಾ ಸರ್ಕಾರಕ್ಕಾಗಲಿ ದಯವಿಟ್ಟು ತಿಳಿಸಿ. ಹಾಗೆ ತಿಳಿಸಿದರೆ ಆವನು ಯಾರೇ ಒಬ್ಬ ದೊಡ್ಡ ಅಧಿಕಾರಿಯಾಗಿರಲಿ ಆತನ ಮೇಲೆ ಶಿಸ್ತಿನ ಕ್ರಮವನ್ನು ತೆಗೆದು ಕೊಳ್ಳುವುದಕ್ಕೆ ನಾವು ಹಿಂಜರಿಯುವುದಿಲ್ಲ. ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಿ ರಾಜ್ಯದ ಪ್ರತಿಯೊಬ್ಬ ಪ್ರಜೆಗೂ ನಾವು ನ್ಯಾಯವನ್ನು ಸಮಾನವಾಗಿ ಒದಗಿಸಿಕೊಡುತ್ತೇವೆ. It is not vertical. It is an uniform level of investigation and treatment.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಎಲ್ಲರಿಗೂ ಅಂದರೆ ಚುನಾಯಿತ ಪ್ರತಿನಿಧಿಗಳನ್ನೂ ಸೇರಿಸಿ ತರುತ್ತೀರಾ?

SRI M. VEERAPPA MOILY.—There is a provision to do. We will do that.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಆದನ್ನು ಬೇಗ ಮಾಡಿ.

(MR. DEPUTY SPEAKER in the Chair)

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಪೂರ್ಣವಾಗಿ ವಿಜಿಲೆನ್ಸ್ ಕಮೀಷನ್‌ಗೆ ಸೀಮಿತವಾದ ವಿಚಾರ. ಮಾನ್ಯ ಕೃಷ್ಣಪ್ಪನವರು ಕೆಲವು ಗಂಭೀರವಾದ ವಿಚಾರಗಳನ್ನು ಹೇಳಿದರು. ಭ್ರಷ್ಟಾಚಾರಕ್ಕೆ ಜಾತಿ ಇಲ್ಲ. ಇದು ಒಂದೇ ಜಾತಿಗೆ ಸೀಮಿತವಾಗಿಲ್ಲ. ಜಾತಿಮತಗಳಿಲ್ಲವನ್ನೂ ಮೀರಿರುವಂತಹ ಒಂದು ದೊಡ್ಡ ಪಿಡುಗು ಇದಾಗಿದೆ. ಈ ೨೪ ಜನ ಅಧಿಕಾರಿಗಳ ಪಟ್ಟಿಯಲ್ಲಿ ಒಕ್ಕಲಿಗರು, ಲಿಂಗಾಯ್ತರು, ಬ್ರಾಹ್ಮಣರು ಮುಂತಾದ ಎಲ್ಲ ಜಾತಿಯವರೂ ಇದ್ದಾರೆ. ಆದ್ದರಿಂದ ಇದು ಕೇವಲ ಯಾವುದೋ ಒಂದು ಜಾತಿಗೆ ಇದು ಸೀಮಿತವಾಗಿಲ್ಲ. ಅಥವಾ ವಿಜಿಲೆನ್ಸ್ ಕಮೀಷನ್ ಕೇವಲ ಯಾವುದೋ ಒಂದು ಜಾತಿಗೆ ಸಂಬಂಧಪಟ್ಟವರ ಮೇಲೆ ಕಾರ್ಯಾಚರಣೆಯನ್ನು ಮಾಡಿಲ್ಲ. ಎಲ್ಲೇ ಭ್ರಷ್ಟಾಚಾರ ನಡೆಯಲಿ ಅದನ್ನು ನಿರ್ದಾಕ್ಷಿಣ್ಯವಾಗಿ ನಿಗ್ರಹ ಮಾಡತಕ್ಕ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ.

ಯಾವ ವರ್ಗದ ಅಧಿಕಾರಿಯು ಮೇಲೇ ಆಗಲಿ ಸರಿಯಾದ ಕ್ರಮವನ್ನು ತೆಗೆದುಕೊಂಡು ಈ ವಿಜಿಲೆನ್ಸ್ ಚೆನ್ನಾಗಿ ಕೆಲಸ ಮಾಡಿದೆ. ಎಲ್ಲಾದರೂ ತಾರತಮ್ಯವಾಗಿದೆ ಎಂದು ತಮ್ಮ ಗಮನಕ್ಕೆ ಬಂದಿದ್ದರೆ ದಯವಿಟ್ಟು ಅದನ್ನು ಸರ್ಕಾರದ ಗಮನಕ್ಕೆ ಇಲ್ಲವೇ ವಿಜಿಲೆನ್ಸ್ ಕಮೀಷನ್‌ಗೆ ತಿಳಿಸಿದರೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆಂದು ತಿಳಿಸಬಯಸುತ್ತೇನೆ.

ಸಾಮಾನ್ಯವಾಗಿ ಮಾನ್ಯ ಸದಸ್ಯರು ಒಂದು ವಿಚಾರವನ್ನು ಹೇಳಿದರು. ಮಾಂಗಲ್ಯಸೂತ್ರ ಇದನ್ನು ಬಹಳ ನಿರ್ದಾಕ್ಷಿಣ್ಯವಾಗಿ ಮತ್ತು ಕೈಬಳಿ ಇಂಥದ್ದನ್ನು ಸಂಗ್ರಹ ಮಾಡಿರತಕ್ಕಂಥದ್ದು ಇದನ್ನು ಕೂಡ ಬಲಾತ್ಕಾರವಾಗಿ ತೆಗೆಯಬೇಕೆಂದು ಹೇಳುತ್ತಾರೆಂದು ಹೇಳಿದರು. ಇದರಲ್ಲಿ ಬಂಗಾರವೇನು ಇರುತ್ತದೆ ಅದರ ತೂಕವನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಬಂಗಾರ ಎಂದರೆ ಮಾಂಗಲ್ಯಸೂತ್ರ ಮತ್ತು ಬಳೆ they will have to value it. They will have to ask the weighment. ಎಷ್ಟು ತೂಕವಿದೆ ಎಂದು ಕೆಲವು ಸಾರಿ ಕೇಳಿರಬಹುದು. ೨೪ ಜನ ಆಫೀಸರುಗಳು ಇಂಥ ಪ್ರಸಂಗದಲ್ಲಿ ಇದ್ದಾರೆ. ತೂಕವನ್ನು ಕೇಳಿದಾಗ ಹೇಳಿರಬಹುದು. ತೂಕ ಹೇಳುವಾಗ ಅದನ್ನು ತೆಗೆದು ಕೂಡ ತೂಕ ಮಾಡುತ್ತಾರೆ. ಆದರೆ ಅವುಗಳನ್ನು ಕೇಳುವ ಪ್ರಸಂಗ ನಮ್ಮ ಗಮನಕ್ಕೆ ಬಂದಿಲ್ಲ. ಮಾಂಗಲ್ಯಸೂತ್ರ ಅವರಾಗಿ ಹೇಳಿದರೆ ಈ ಪ್ರಸಂಗ ಬರುವುದಿಲ್ಲ. We will avoid it. ಆದರೆ ಈ ಸದನದ ಸದಸ್ಯರ ಸಾಮಾನ್ಯ ಮನೋಭಾವ ಏನು ಎಂದರೆ ಮಾಂಗಲ್ಯಸೂತ್ರ ಇದಕ್ಕೆ ಬಹಳ ಪಾವಿತ್ರ್ಯತೆ ಇದೆ. ಈ ಒಂದು ಪಾವಿತ್ರ್ಯತೆಯನ್ನು ಉಳಿಸಿಕೊಳ್ಳ ಬೇಕು. ಇದನ್ನು ಕೇಳುವುದಾಗಲಿ, ತೂಕ ಮಾಡುವುದಾಗಲಿ ಕೂಡದು. ಇದನ್ನು ಅವಾಯ್ಡ್ ಮಾಡಬೇಕು. ಇಂಥ ಪೀಡನೆ ನಡೆಯು ಬಾರದೆಂದು ಹೇಳಿದ್ದಾರೆ.

SRI C.M. ARUMUGHAM.—They should and must avoid it. We will not allow it.

SRI M. VEERAPPA MOILY.—I am assuring this House that we will avoid it. We will convey this to the vigilance Commission. After all it is not our intention to harass the women folk. We will definitely avoid it. ಸಾಮಾನ್ಯವಾಗಿ ಮಾನ್ಯ ಸದಸ್ಯರ ಯಾವ ಒಂದು ಮಾನವೀಯ ವ್ಯಾಕುಲತೆ ಇದೆ ಅದು ಸರ್ಕಾರಕ್ಕೆ ಅರ್ಥವಾಗುತ್ತದೆ. We will pass on the consensus of this House to the Vigilance Commission. ಅಂಥ ಎಲ್ಲರೂ ಬಹುಮಟ್ಟಿಗೆ ಯಾರಾದರೂ ನೋಡಿದ್ದರೆ ಅದನ್ನು ಆಗದ ಹಾಗೆ ಈ ಬಗ್ಗೆ ಸಹಕಾರ ಬೇಕು. ಸಹೋದರಿಯರಾದಂಥ ಕುಮಾರಿ ಪ್ರಮೀಳಾರವರು ಬಹಳ ಸೂಕ್ಷ್ಮವಾಗಿ ಹೇಳಿದ್ದಾರೆ, ಭ್ರಷ್ಟಾಚಾರದ ನಿರ್ಮೂಲನೆಗೆ ನಮ್ಮ ದೇಶದ ಸಂಸ್ಕೃತಿಯನ್ನು ಎತ್ತಿ ಹಿಡಿಯಲು ಮಹಿಳೆಯರು ಮನೆಗಳ ಮುಂದೆ ಬರುತ್ತಿದ್ದಾರೆ. ಈ ಚಳುವಳಿ ಬಹುಶಃ ಸಮಾಜದಲ್ಲಿ ಆದರೆ ಅನೇಕ ಪಿಡುಗು ಬಹುತೇಕ ನಿರ್ಮೂಲನವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಚಳುವಳಿ ಮಾಡತಕ್ಕಂಥದ್ದು ಸೂಕ್ತವಾಗಿರುತ್ತದೆ.

(ಗೊಂದಲ)

ಶ್ರೀ ಎಂ. ಚಂದ್ರಶೇಖರ್.—ಈ ದೇಶದಲ್ಲಿ ಮಹಿಳೆಯರು ಆದರಲ್ಲೂ ಅರ್ಧಭಾಗ ಹಕ್ಕನ್ನು ತೆಗೆದುಕೊಳ್ಳುತ್ತಾರೆಯೇ ?

ಕುಮಾರಿ ಎಸ್. ಪ್ರಮೀಳ.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್. ಮಾನ್ಯ ಮಳ್ಳೂರಂ ಅನಂದರಾಯರಂ ಮಾತನಾಡುತ್ತಾ ಹೇಳಿದರು, ಈ ರೀತಿ ಭ್ರಷ್ಟಾಚಾರಕ್ಕೆ ಮಹಿಳೆಯರೇ ಕಾರಣರು ಎಂದು ಹೇಳಿದರು. ಗಂಡಸರು ಆಫೀಸಿಗೆ ಹೋಗಿ ಕೆಲಸ ಮಾಡತಕ್ಕಂಥ ಕಾಲದಲ್ಲಿ ಲಂಚವನ್ನು ತೆಗೆದು ಕೊಳ್ಳಿ ಎಂದು ಯಾವ ಮಹಿಳೆಯರೂ ಹೇಳುವುದಿಲ್ಲ. ನಿಮಗೆ ಯೋಗ್ಯತೆ ಇದ್ದರೆ ಲಂಚವನ್ನು ತೆಗೆದುಕೊಳ್ಳುವುದಿಲ್ಲವೆಂದು ಮನಸ್ಸು ಮಾಡಬೇಕು. ಹೆಂಡತಿ ಹೇಳಿದಂತೆ ಕೇಳುವಂಥ ಗಂಡ ಹೆಣ್ ಪೆಕಡು ಆಗಬೇಡಿ ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಲಂಚ ತೆಗೆದುಕೊಳ್ಳುವಂಥ ಗಂಡಸರು ಮನೆಗೆ ಹೋಗಿ ಹೆಂಡತಿಯ ಕೈಯಲ್ಲಿ ಲಂಚ ಕೊಡುತ್ತಾರೆ. ಚಿನ್ನ, ಆಭರಣ ಎಲ್ಲವನ್ನೂ ಕೊಡುತ್ತಾರೆ. ಆದ್ದರಿಂದ ಅವರೂ ಕೂಡ ಭ್ರಷ್ಟಾಚಾರದಲ್ಲಿ ಶಾಮೀಲಾದಂತಾಯಿತು. ಈ ಒಂದು temptation ಏನು ಇದೆ ಅದನ್ನು ಅವರು ಮೊದಲು ಎದುರಿಸಬೇಕು. ಮೊರಾರ್ಜಿಯವರ ಕಾಲದಲ್ಲಿ ೧೪ ಕ್ಯಾರೆಟ್ ಗೋಲ್ಡನ್ನು ಅದಕ್ಕಾಗಿಯೇ ತಂದಿದ್ದರು. That was the best socio-economic reform which our country would not accept. ಅದನ್ನು ತಾವು ಮೊದಲು ಒಪ್ಪಿಕೊಳ್ಳಿ ತ್ತೀರಾ.

ಶ್ರೀ ಕೆ. ಭಾಸ್ಕರ ನಾಯ್ಕ್.—ಹೆಣ್ಣು ಪೆಕಡು ಎಂದು ಆಯಮ್ಮ ನನ್ನನ್ನು ಹೇಳಿದರು. ಹೆಣ್ಣು ಪೆಕಡು. ಕಾಕ ಪೆಕಡು ಎಂದರೆ ಏನು ಏನೆಂಬುವುದು ನನಗೆ ಗೊತ್ತಿಲ್ಲ. My say is subject to correction.

(ಗೊಂದಲ)

ಸ್ವಾಮಿ ಅದಕ್ಕೆ ನಾನು ಹೇಳುವುದು ತಿಯರ್ಯಾಟಿಕಲ್ ಆಗಿ ಹೇಳುವುದರಿಂದ ಪ್ರಯೋಜನವಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ನನ್ನದೊಂದು ಪಾಯಿಂಟ್ ಆಫ್ ಆರ್ಡರ್, ಮಹಿಳೆಯರ ಬಗ್ಗೆ ಪ್ರಮಿಳಾರವರು ಇಷ್ಟು ವಿಕೆ ಮಾತನಾಡುತ್ತಾರೆ. ಇದು ನನಗೆ ಬಹಳ ಆಶ್ಚರ್ಯವಾಗುತ್ತಿದೆ. ಏತಕ್ಕೆಂದರೆ ಭ್ರಷ್ಟಾಚಾರದಲ್ಲಿ ಮಹಿಳೆಯರು ಭಾಗಿಗಳಾಗಿರುತ್ತಾರೆ. ಅನೇಕ ಜನ ಆಫೀಸರ್‌ಗಳು ಆಫೀಸ್‌ನಲ್ಲಿ ಇರುತ್ತಾರೆ. ಮನೆಯಲ್ಲಿ ಮಡದಿಯರು ಅದನ್ನು ಸ್ವೀಕಾರಮಾಡುತ್ತಾರೆ.

ಕುಮಾರಿ ಎಸ್. ಪ್ರಮೀಳ.—ನಮ್ಮ ಕರ್ನಾಟಕದಲ್ಲಿ ಮಾನ್ಯ ಬೊಮ್ಮಾಯಿಯವರು ಮಾತ ನಾಡುತ್ತಾ ಆಫೀಸರ್‌ಗಳ ಮಡದಿಯರು ಎಂದು ಹೇಳಿದರು. ಎಷ್ಟು ಜನ ಮಡದಿಯರು ಇರುತ್ತಾರೆ ಸ್ವಾಮಿ, ನಾನು ತಿಳಿದುಕೊಂಡಿದ್ದೆ ಒಬ್ಬರಿಗೆ ಒಬ್ಬರೇ ಮಡದಿಯಿರುತ್ತಾರೆಂದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದರು ಮನೆಯಲ್ಲಿ ಆಫೀಸರ್‌ಗಳ ಮಡದಿಯರು, ಎಲ್ಲ ಆಫೀಸರ್‌ಗಳ ಮಡದಿಯವರು ಎಂದು ಹೇಳಲಿಲ್ಲ. ಭ್ರಷ್ಟಾಚಾರ ಅವರು ಹೇಳಿದ ಹಾಗೆ ಜಾತ್ಯಾತೀತ, ಪಕ್ಷಾತೀತ, ಲಿಂಗಾತೀತ. ಲಂಚವನ್ನು ಮಹಿಳೆಯರು ತೆಗೆದು ಕೊಳ್ಳುತ್ತಾರೆ, ಇದಕ್ಕೆ ಲಿಂಗ ಭೇದವಿಲ್ಲ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ ನನ್ನದೊಂದು ಹೇಳಿಕೆಯಲ್ಲಿ ಅಸ್ಪಷ್ಟತೆ ಇದೆ, ಅದನ್ನು ಹೇಳುತ್ತಾ ಇದ್ದೇನೆ.

MR. DEPUTY SPEAKER.—There is no point of order.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆದುದರಿಂದ ಮಾನ್ಯ ಅಧ್ಯಕ್ಷರೇ ಈಗ ಮಾನ್ಯ ಸದಸ್ಯರಿಗೆ ಕೆಲವು ಮಾಹಿತಿಗಳನ್ನು ಒದಗಿಸಿದ್ದೇವೆ. ವಿಜಿಲೆನ್ಸ್ ಕಮೀಷನ್ particularly after the High Court judge has taken over ಬಹಳ ಸಾಮರ್ಥ್ಯದಿಂದ, ಪ್ರಾಮಾಣಿಕತನದಿಂದ, ದಕ್ಷತೆಯಿಂದ ಆಡಳಿತ ನಡೆಸುತ್ತಿದ್ದಾರೆ. ಆದುದರಿಂದ ಜಾತಿ ವಿಚಾರವನ್ನು ಮುಂದೆ ತಂದು, ಇಲಾಖೆಯ ವಿಚಾರವನ್ನು ಮುಂದೆ ತಂದು ಯಾವ ರೀತಿಯಾದ ಆಪಾದನೆ ಮಾಡತಕ್ಕಂಥ ಮೋಟೀವ್, ಇಂಟರ್ ಪ್ರಿಟಿಷನ್ ಸರಿಯಾದುದಲ್ಲ. ಸಮರ್ಪಕವಾಗಿ ವಿಜಿಲೆನ್ಸ್ ಕಾರ್ಯಾಚರಣೆ ಮಾಡುತ್ತಿರುವಾಗ, ಅದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಮತ್ತಷ್ಟು ದಕ್ಷತೆಯಿಂದ ಧೈರ್ಯದಿಂದ ಅವರು ಪ್ರಾಮಾಣಿಕತನದಿಂದ ಕಾರ್ಯಾಚರಣೆಯನ್ನು ಮಾಡಲಿಕ್ಕೆ ನಾವೆಲ್ಲರೂ ಸಹಕಾರ ಕೊಟ್ಟರೆ ಸಮಾಜಕ್ಕೆ ಪ್ರಯೋಜನವಾಗುತ್ತದೆ. ಮತ್ತು ಸರ್ಕಾರದ ಯಂತ್ರ ಮತ್ತಷ್ಟು ಚುರುಕುಗೊಂಡು ದಕ್ಷತೆಯಿಂದ, ಸ್ವಚ್ಛತೆಯಿಂದ ಹೋಗಲು ಸಾಧ್ಯವಾಗುತ್ತದೆ. ಆದ್ದರಿಂದ ವಿಜಿಲೆನ್ಸ್ ಕಮೀಷನ್ ಕೆಲಸ ಮಾಡತಕ್ಕಂಥ ಕಾಲದಲ್ಲಿ ಪ್ರಾಮಾಣಿಕವಾಗಿ, ದಕ್ಷತೆಯಿಂದ ನಿಸ್ಪಕ್ಷಪಾತತೆಯಿಂದ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಈ ಸದನವನ್ನು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಂಗಿಸುತ್ತೇನೆ.

ಶ್ರೀ ಎಚ್.ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ನಾನು ಜಾಗೃತ ಆಯೋಗದ ಮೇಲೆ ಆರೋಪ ಮಾಡಿದಾಗ ಅದು ಜಾಗೃತ ಆಯೋಗದ ಅಧ್ಯಕ್ಷರ ಮೇಲೆಯೇ ಎಂದು ಮಾನ್ಯ ಮಂತ್ರಿಗಳು ಭಾವನೆ ಮಾಡಬಾರದು. ಇಲ್ಲಿ ಜಾಗೃತ ಆಯೋಗದವರಿಗೆ ಸುದ್ದಿಯನ್ನು ಕೊಡುವವರೂ ಸಹ ಪೋಲೀಸಿನವರೇ ಹಾಗೂ ಕಾರ್ಯಾಚರಣೆ ಮಾಡುವವರೂ ಸಹಾ ಪೋಲೀಸರೇ ಆಗಿರುತ್ತಾರೆ. ಕೆಲವು ಸಂದರ್ಭದಲ್ಲಿ ನಾಳೆ ನಾಳಿದ್ದರಲ್ಲಿ ಪ್ರಮೋಷನ್ ಸಿಗುವಂತಹವರ ಮೇಲೆ ಇವರು ರೈಡ್ ಮಾಡುತ್ತಾರೆ. ಇದರಿಂದಾಗಿ ಅಂಥವರನ್ನು ಸಸ್ಪೆಂಡ್ ಮಾಡುವುದರಿಂದ ಅವರಿಗೆ ದೊರಕುವ ಪ್ರಮೋಷನ್ ನಿಂತು ಹೋಗುತ್ತದೆ. ಅವರು ಇನ್ನು ಮುಂದೆ ಅವರ ಜೀವನದಲ್ಲಿ ಒಂದು ಪ್ರಮೋಷನ್ ಎಂಬುದನ್ನು ನೋಡುವುದಕ್ಕಾಗುವುದಿಲ್ಲ. ಈಗ ಅಧಿಕಾರಿಗಳಲ್ಲೂ ಕೂಡಾ ಒಂದು ವಿಧವಾದ ಜಾತೀಯತೆ, ಮತ್ತೊಂದು ಮಗದೊಂದು ವ್ಯಾಪಕವಾಗಿ ಹರಡಿದೆ. ಒಂದೇ ಜಾತಿಯಲ್ಲಿ ಈಗ ಹಲವಾರು ಪಂಗಡಗಳು ಇವೆ, ಇದನ್ನು ಯಾವ ರೀತಿ ತಡೆಗಟ್ಟಬೇಕೆಂದು ಸರ್ಕಾರ ಗಮನಿಸಬೇಕು. ಎಲ್ಲಿ ಮೈಲಿಗೆ ಇರುತ್ತದೆ ಅದನ್ನು ಇಟ್ಟು ಕೊಂಡಿರುವುದಕ್ಕೆ ಸಾಧ್ಯವಿಲ್ಲ. ಆ ಹೊಲಸನ್ನು ಆದಷ್ಟು ಬೇಗ ತೊಳೆಯಬೇಕಾಗುತ್ತದೆ. ಸರ್ಕಾರಕ್ಕೆ ಪ್ರಾಮಾಣಿಕ ಇಚ್ಛೆ ಇರಬಹುದು. ಯಾವ ಇಲಾಖೆಗಳಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ಹಾಗೂ ಆಳವಾಗಿ ಹರಡಿಕೊಂಡಿದೆ ಆ ಇಲಾಖೆಗಳನ್ನು ಈಗಲೂ ಕೂಡಾ ಕೈಬಿಟ್ಟಿದ್ದೀರಿ. ಹೆಚ್ಚು ಮುತುವರ್ಜಿಯಿಂದ ಸರ್ಕಾರ ಆ ಬಗ್ಗೆ ಗಮನ ಕೊಡಬೇಕಾಗುತ್ತದೆಂದು ನಾನು ಈ ಮೂಲಕ ತಿಳಿಸಬಯಸುತ್ತೇನೆ.

Representation by Members

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ನಾನು ಒಂದು ಸೀರಿಯಸ್ ಮ್ಯಾಟರ್ ಬಗ್ಗೆ ನೋಟೀಸನ್ನು ಕಳುಹಿಸಿಕೊಟ್ಟಿದ್ದೆ.

MR. DEPUTY SPEAKER.—You raise it after some time.

SRI MICHAEL B. FERNANDES.—It is with regard to St. John's college...ದಯಮಾಡಿ ಇದನ್ನು ಗಮನಿಸಬೇಕು. ಅಲ್ಲಿ ವಿದ್ಯಾರ್ಥಿಗಳಿಗೆ...

MR. DEPUTY SPEAKER.—We have received that notice. Do not raise it now.

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್.—ಈ ವಿಷಯದ ಬಗ್ಗೆ ನಾನು ಎಂದು ಪ್ರಸ್ತಾಪ ಮಾಡಲಿ.

ಉದಾಧ್ಯಕ್ಷರು.—ನಾಳೆ ಮಾಡಿ.

ಶ್ರೀಮತಿ ಸುಶೀಲಾ ಚೆಲುವರಾಜ್.—ಅಧ್ಯಕ್ಷರೆ, ಈ ಹಿಂದೆ ಮಾತನಾಡಿದ ಮಾನ್ಯ ಸದಸ್ಯರೊಬ್ಬರು ತಮ್ಮ ಭಾಷಣದಲ್ಲಿ ಕೆಲವು ಅನ್‌ಪಾರ್ಲಿಮೆಂಟರಿ ಪದಗಳನ್ನು ಉಪಯೋಗಿಸಿರುತ್ತಾರೆ. ಅವುಗಳನ್ನು ದಯಮಾಡಿ ಕಡತದಿಂದ ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

PRESENTATION OF PETITIONS

SRI D. T. MAYANNA.—Sir, I present a petition signed by the Chairman, Group Panchayat, Nidasale, Kunigal Taluk, Tumkur District, regarding drinking water facility to Nidasale Villge.

SRI N. B. SIRDESAI.—Sir, I present a petition signed by the TCH Trained candidates of Khanapur Taluk regarding indiscrimination shown by the Selection Committee while selecting TCH trained candidates.

MR. DEPUTY SPEAKER.—Petitions presented.